# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಸೆಪ್ಟೆಂಬರ್ 11, 2020

ಸಂಪುಟ : 47 ಸಂಚಿಕೆ : 122 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 4.00 www.janathavani.com janathavani@mac.com


## ಪ್ಲಾಸ್ಟಿಕ್-ಸಿಮೆಂಟ್ ಕಾರ್ಖಾನೆಗಳಿಗೆ ಕಸ ವಿಲೇವಾರಿ ಮಾಡಲು ಸೂಚನೆ

ದಾವಣಗೆರೆ, ಸೆ. 10 – ಪ್ಲಾಸ್ಟಿಕ್ ತ್ಯಾಜ್ಯವನ್ನು ಸಿಮೆಂಟ್ ಕಂಪನಿಗಳಿಗೆ ರವಾನಿಸುವ ಮೂಲಕ ಹಾಗೂ ಹಸಿ ಕಸವನ್ನು ಸಾವಯವ ಗೊಬ್ಬರವಾಗಿ ಪರಿವರ್ತಿಸುವ ಮೂಲಕ ವಿಲೇವಾರಿ ಮಾಡುವಂತೆ ತೋಟಗಾರಿಕೆ, ರೇಷ್ಮೆ ಹಾಗೂ ಪೌರಾಡಳಿತ ಸಚಿವ ನಾರಾಯಣ ಗೌಡ ತಿಳಿಸಿದ್ದಾರೆ.



ಇಲ್ಲಿನ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಇಂದು ಕರೆಯಲಾಗಿದ್ದ ತಮ್ಮ ಇಲಾಖೆಗಳ ಪ್ರಗತಿ ಪರಿಶೀಲನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದ ಅವರು, ಪ್ಲಾಸ್ಟಿಕ್ ಅನ್ನು ಸಿಮೆಂಟ್ ಕಂಪನಿಗಳಿಗೆ ರವಾನಿಸಲಾಗುತ್ತಿದೆ ಎಂದು ತಮಗೆ ವರದಿ ಕಳಿಸಲಾಗಿದೆ. ಆದರೆ, ಇಲ್ಲಿನ ಯಾವುದೇ ಪ್ಲಾಸ್ಟಿಕ್ ಕಂಪನಿಗಳಿಗೆ ಹೋಗಿಲ್ಲ. ಈ ಬಗ್ಗೆ ಸುಳ್ಳು ವರದಿ ಕಳಿಸಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಗರದಲ್ಲಿ 450 ಟನ್ ಪ್ಲಾಸ್ಟಿಕ್ ಕಸ ವಿಲೇವಾರಿ ತಾಣದಲ್ಲಿದೆ ಎಂದು ನಗರಾಭಿವೃದ್ಧಿ ಕೋಶದ ಯೋಜನಾಧಿಕಾರಿ ನಜ್ಮಾ ತಿಳಿಸಿದರು. ಹರಿಹರ ಸೇರಿದಂತೆ ಹಲವೆಡೆ ಇರುವ ಪ್ಲಾಸ್ಟಿಕ್ ಬಗ್ಗೆ ಮಾಹಿತಿ ಪಡೆದ ನಾರಾಯಣ ಗೌಡ, ಪ್ಲಾಸ್ಟಿಕ್ ಎಷ್ಟು ದಿನ ಸಂಗ್ರಹಿಸಲು ಸಾಧ್ಯ? ನೀವೇ ಕಂಪನಿಯನ್ನು ಸಂಪರ್ಕಿಸಿ ರವಾನಿಸಬೇಕು ಎಂದು ತಾಕೀತು ಮಾಡಿದರು.

### 10-15 ವರ್ಷಗಳಿಂದ ಬಾಕಿ ಕಂದಾಯ ವಸೂಲಿಯಾಗದಿದ್ದರೆ ಅಧಿಕಾರಿಗಳ ವಿರುದ್ಧ ಕ್ರಮ

**ಕಂದಾಯ ಕ್ರಮ :** ಕುಡಿಯುವ ನೀರು, ಮಳಿಗೆ ಬಾಡಿಗೆ ಹಾಗೂ ಅಂಗಡಿಗಳ ಶುಲ್ಕಗಳು 10-15 ವರ್ಷಗಳಿಂದ ಬಾಕಿ ಇದೆ. ಸಂಗ್ರಹ (2ನೇ ಪುಟಕ್ಕೆ)

## ಪ್ಲಾಸ್ಟಿಕ್ ಟೋಪಿಗಳು ಹೆಲ್ಮೆಟ್ ಅಲ್ಲ

ದಾವಣಗೆರೆ, ಸೆ. 10 – ಪ್ಲಾಸ್ಟಿಕ್ ಟೋಪಿಯ ರೀತಿಯ ಹೆಲ್ಮೆಟ್‌ಗೆ ನಿಯಮಗಳಲ್ಲಿ ಮಾನ್ಯತೆ ಇಲ್ಲ ಎಂದಿರುವ ಎಸ್ಪಿ ಹನುಮಂತರಾಯ, ತಲೆಯನ್ನು ಪೂರ್ಣ ಪ್ರಮಾಣದಲ್ಲಿ ಮುಚ್ಚುವ ಐ.ಎಸ್.ಐ. ಗುಣಮಟ್ಟದ ಹೆಲ್ಮೆಟ್ ಧರಿಸುವುದು ಕಡ್ಡಾಯ ಎಂದು ತಿಳಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಹೆಲ್ಮೆಟ್ ಕುರಿತು ಹೊಸ ನಿಯಮವನ್ನೇನೂ ಜಾರಿಗೆ ತರುತ್ತಿಲ್ಲ. ಇದು ಮೊದಲಿನಿಂದಲೂ ಇರುವ ನಿಯಮ ಎಂದು ಸ್ಪಷ್ಟಪಡಿಸಿದ್ದಾರೆ.

### ಗುಣಮಟ್ಟದ ಹೆಲ್ಮೆಟ್ ಖರೀದಿಸಲು ವಾರದ ಸಮಯ : ಎಸ್ಪಿ

ಜನರು ದಂಡದಿಂದ ತಪ್ಪಿಸಿಕೊಳ್ಳಲು ಪ್ಲಾಸ್ಟಿಕ್ ಟೋಪಿಯ ರೀತಿಯದ್ದನ್ನು ಧರಿಸುತ್ತಿದ್ದಾರೆ. ಇದಕ್ಕೆ ಬೆಲ್ಟ್ ಸಹ ಹಾಕಿಕೊಳ್ಳುತ್ತಿಲ್ಲ. ಇದರಿಂದ ತಲೆಗೆ ಯಾವುದೇ ರಕ್ಷಣೆಯೂ ಸಿಗುವುದಿಲ್ಲ. ಅಂಥದನ್ನು ಹೆಲ್ಮೆಟ್ ಎಂದು ಪರಿಗಣಿಸಲೂ ಸಾಧ್ಯವಿಲ್ಲ.

ಜನರಿಗೆ ಈ ಬಗ್ಗೆ ದಂಡವನ್ನೂ ವಿಧಿಸುತ್ತಿಲ್ಲ. ಒಳ್ಳೆಯ (2ನೇ ಪುಟಕ್ಕೆ)

# ಕೊರೊನಾ ನಿಯಂತ್ರಣಕ್ಕೆ 900 ವೈದ್ಯರ ನಿಯೋಜನೆ

## ಜಿಲ್ಲಾಡಳಿತದ ಜೊತೆಗಿನ ವಿಡಿಯೋ ಕಾನ್ಫರೆನ್ಸ್‌ನಲ್ಲಿ ಸಿಎಂ ಯಡಿಯೂರಪ್ಪ

ಬೆಂಗಳೂರು, ಸೆ. 10 - ಕೊರೊನಾ ನಿಯಂತ್ರಣಕ್ಕಾಗಿ 900 ಸ್ನಾತಕೋತ್ತರ ವೈದ್ಯರನ್ನು ನಿಯೋಜಿಸಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

ವಿವಿಧ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಸಿಇಓ ಹಾಗೂ ಹಿರಿಯ ಅಧಿಕಾರಿಗಳ ಜೊತೆ ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತನಾಡಿದ ಸಂದರ್ಭದಲ್ಲಿ ಈ ವಿಷಯ ತಿಳಿಸಿದ ಯಡಿಯೂರಪ್ಪ, ಕಾಲೇಜು ವಿದ್ಯಾರ್ಥಿಗಳ ಕೌನ್ಸಿಲಿಂಗ್ ಮುಗಿದಿದ್ದು, ಇನ್ನೆರಡು ದಿನಗಳಲ್ಲಿ ಈ ವೈದ್ಯರನ್ನು ವಿವಿಧ ಜಿಲ್ಲೆಗಳಿಗೆ ನಿಯೋಜಿಸಲಾಗುವುದು ಎಂದು ತಿಳಿಸಿದರು.

ಕೊರೊನಾ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರಲು ಕಾರಣ ಏನು ಎಂದು ಜಿಲ್ಲಾಡಳಿತವನ್ನು ಪ್ರಶ್ನೆ ಮಾಡಿದ ಮುಖ್ಯಮಂತ್ರಿ, ಸೋಂಕು ತಡೆಗಟ್ಟಲು ಎಲ್ಲಾ ಹಂತಗಳಲ್ಲೂ ಬಿಗಿ ಕ್ರಮ ಕೈಗೊಳ್ಳಿ. ನಿಮಗೆ ಸರ್ಕಾರ ಸಂಪೂರ್ಣ ಸಹಕಾರ ನೀಡಲಿದೆ ಎಂದರು.



ಜಿಲ್ಲಾಧಿಕಾರಿಗಳು ಕೊರೊನಾ ಪರೀಕ್ಷೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಿ. ಪರೀಕ್ಷೆಗೆ ಅಗತ್ಯವಿರುವ ಕಿಟ್‌ಗಳನ್ನು ಒದಗಿಸುವ ವ್ಯವಸ್ಥೆ ಮಾಡಲಾಗುವುದು. ಅಗತ್ಯವಿರುವ ವೈದ್ಯರನ್ನು ನೇಮಕ ಮಾಡಲಾಗುವುದು. ಪ್ರಯೋಗಾಲಯಗಳು ಕಡಿಮೆ ಇದ್ದಲ್ಲಿ ಪಕ್ಕದ ಜಿಲ್ಲೆಯಲ್ಲಿ ಮಾಡಿಸಲು ಕ್ರಮ ವಹಿಸಬೇಕು ಎಂದವರು ಹೇಳಿದ್ದಾರೆ.

ಬೂತ್ ಮಟ್ಟದಲ್ಲಿ ಟಾಸ್ಕ್ ಫೋರ್ಸ್ ಸಮಿತಿಗಳು ಸೋಂಕು ಹರಡುವ ಸಾಧ್ಯತೆಗಳು ಹೆಚ್ಚಿರುವ ಪ್ರದೇಶಗಳನ್ನು ಗುರುತಿಸಬೇಕು. ಆಕ್ಸಿಜನ್ ಸಮಸ್ಯೆ ಇದ್ದರೆ ಹೆಚ್ಚು ಆಕ್ಸಿಜನ್ ಲಭ್ಯವಿರುವ ಜಿಲ್ಲೆಗಳಿಂದ ಪಡೆದುಕೊಳ್ಳಬೇಕು.

ಮನೆ ಮನೆ ಸರ್ವೇ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಪ್ರಾಥಮಿಕ ಸಂಪರ್ಕವನ್ನು ಪತ್ತೆ ಹಚ್ಚಲು ಕ್ರಮ ವಹಿಸಬೇಕು. ರಾಜ್ಯದಲ್ಲಿ ಮರಣ ಪ್ರಮಾಣವನ್ನು ತಗ್ಗಿಸುವುದು ಆದ್ಯತೆಯಾಗಬೇಕು ಎಂದು ಹೇಳಿದ್ದಾರೆ.

ಸಾರ್ವಜನಿಕರಿಗೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಅರಿವು ಮೂಡಿಸುವ ಕಾರ್ಯ (3ನೇ ಪುಟಕ್ಕೆ)

### ಮಳೆ ಹಾನಿಗೀಡಾದ ಮನೆಗಳ ಪುನರ್ ನಿರ್ಮಾಣ ಕಾರ್ಯ ಆರಂಭಿಸಿ

ಮಳೆಯಿಂದ ಹಾನಿಗೊಳಗಾದ ಮನೆಗಳ ಪುನರ್‌ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಬೇಕು. ಕಳೆದ ಸಾಲಿನ ಪ್ರವಾಹದಲ್ಲಿನ ಹಾನಿಗೊಳಗಾದ ಮನೆಗಳ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದಾರೆ.

ಪರಿಹಾರ ವಿತರಣೆಯಲ್ಲಿ ಯಾವುದೇ ಗೊಂದಲಗಳಿಗೆ ಅವಕಾಶವಿಲ್ಲದಂತೆ ಕ್ರಮ ಜರುಗಿಸಬೇಕು. ರಾಜ್ಯದಲ್ಲಿ ಉತ್ತಮ ಮಳೆಯಾಗಿದ್ದು, ಕೃಷಿ ಚಟುವಟಿಕೆಗಳು ಚುರುಕುಗೊಂಡ ಹಿನ್ನೆಲೆಯಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಗೊಬ್ಬರದ ಕೊರತೆಯಾಗದಂತೆ ಎಚ್ಚರ ವಹಿಸಬೇಕು ಎಂದು ಹೇಳಿದ್ದಾರೆ. ಮಳೆಯಿಂದ (3ನೇ ಪುಟಕ್ಕೆ)

## ರಸ್ತೆ ಬದಿ ಸಂತೆ, ಗ್ಲಾಸ್ ಹೌಸ್ ಪ್ರವಾಸಿ ತಾಣ



ದಾವಣಗೆರೆ, ಸೆ. 10 – ನಗರದಲ್ಲಿರುವ ತೋಟಗಾರಿಕೆ ಇಲಾಖೆಯ ಬೃಹತ್ ಗಾಜಿನ ಮನೆಗೆ ಹೆಚ್ಚಿನ ಪ್ರವಾಸಿಗರು ಬರಲು ಅಲ್ಲೊಂದು ಭೋಜನ ತಾಣ ನಿರ್ಮಿಸುವುದಾಗಿ ತೋಟಗಾರಿಕಾ ಸಚಿವ ನಾರಾಯಣ ಗೌಡ ತಿಳಿಸಿದ್ದಾರೆ.

ಇಲ್ಲಿನ ಜಿಲ್ಲಾಡಳಿತ ಭವನದಲ್ಲಿರುವ ತುಂಗಭದ್ರಾ ಸಭಾಂಗಣದಲ್ಲಿ ಇಂದು ಆಯೋಜಿಸಲಾಗಿದ್ದ ಇಲಾಖೆಯ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು, ಇಲ್ಲೊಂದು ಭೋಜನ ತಾಣ ನಿರ್ಮಿಸಿದರೆ, ಪಿ.ಬಿ. ರಸ್ತೆಯಲ್ಲಿ ಹೋಗುವ ಪ್ರವಾಸಿಗರು ಬರಲು ಅನುಕೂಲವಾಗುತ್ತದೆ ಎಂದು ಅಭಿಪ್ರಾಯ ಪಟ್ಟರು.

ಖಾಸಗಿ ಸಹಭಾಗಿತ್ವದ ಈ ಯೋಜನೆಗಾಗಿ ಪ್ರವಾಸೋದ್ಯಮ ಸಚಿವರ ಜೊತೆ ಮಾತನಾಡುವುದಾಗಿ ಹೇಳಿದ ಅವರು, ಇಷ್ಟು ದೊಡ್ಡ ಗ್ಲಾಸ್ ಹೌಸ್ ಇರುವುದು ತಮ್ಮ ಗಮನಕ್ಕೇ ಬಂದಿರಲಿಲ್ಲ. ಈ ಗ್ಲಾಸ್ ಹೌಸ್‌ಗೆ ಇನ್ನಷ್ಟು ಪ್ರಚಾರದ ಅಗತ್ಯವಿದೆ ಎಂದು ಹೇಳಿದರು.

**ಕೃಷಿ ಪ್ರವಾಸೋದ್ಯಮ :** ಕೃಷಿ ಪ್ರವಾಸೋದ್ಯಮಕ್ಕೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದಲ್ಲಿ ಯೋಜನೆ ರೂಪಿಸಲಾಗಿದೆ. ಅದರ ಅನ್ವಯ ಪ್ರತಿ ಜಿಲ್ಲೆಯಲ್ಲಿ ಕೃಷಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸಬೇಕಿದೆ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಬೆಳಿಗ್ಗೆಯಿಂದ ಸಂಜೆಯವರೆಗೆ ಕೃಷಿ ತಾಣಗಳಿಗೆ ಭೇಟಿ ನೀಡಲು ಹಾಗೂ ರಾತ್ರಿ ಹೋಂ ಸ್ಟೇ ಮಾಡಲು ಅವಕಾಶವಿರುವ ತಾಣಗಳನ್ನು ರೂಪಿಸುವಂತೆ ಅವರು ಅಧಿಕಾರಿಗಳಿಗೆ ತಿಳಿಸಿದರು.

**ರಸ್ತೆ ಸಂತೆ :** ರೈತರ ಬೆಳೆಗಳನ್ನು ಮಾರಾಟ ಮಾಡಲು ರಸ್ತೆ ಬದಿಗಳಲ್ಲಿ ಸಂತೆಗಳನ್ನು ರೂಪಿಸಬೇಕಿದೆ. ಇದರಿಂದ ಬೆಳೆಗಳಿಗೆ ಹೆಚ್ಚು ಬೇಡಿಕೆ ಬರಲಿದೆ. ಇದಕ್ಕಾಗಿ ನೀರು, ಶೌಚಾಲಯ ಮತ್ತಿತರೆ ವ್ಯವಸ್ಥೆಗಳನ್ನು ಮಾಡುವಂತೆಯೂ ಸಚಿವರು (3ನೇ ಪುಟಕ್ಕೆ)

### ಎಕ್ಕೆಗೊಂದಿಯಲ್ಲಿ ವಸತಿಗೆ 2 ಎಕರೆ ಜಮೀನು

ಹರಿಹರ ತಾಲ್ಲೂಕು ಎಕ್ಕೆಗೊಂದಿಯಲ್ಲಿರುವ ತೋಟಗಾರಿಕೆ ಇಲಾಖೆಯ 15 ಎಕರೆ ಜಮೀನಿನ ಪೈಕಿ ವಸತಿಗಾಗಿ 2 ಎಕರೆ ಜಮೀನು ನೀಡಬೇಕೆಂದು ಶಾಸಕ ರಾಮಪ್ಪ ಮಾಡಿಕೊಂಡ (3ನೇ ಪುಟಕ್ಕೆ)

### ಎಲೆ ಬಳ್ಳಿ ತೋಟಕ್ಕೆ ಪರಿಹಾರ

ಬೆಳ್ಳೂಡಿಯ ನೂರಾರು ಎಕರೆ ಎಲೆ ಬಳ್ಳಿ ತೋಟ ಮೊನ್ನೆ ಸುರಿದ ಮಳೆಯಿಂದ ಹಾಳಾಗಿರುವುದರಿಂದ ನಷ್ಟಕ್ಕೆ ಗುರಿಯಾಗಿರುವ ರೈತರಿಗೆ ಪರಿಹಾರ ನೀಡುವಂತೆ ಸಚಿವ ನಾರಾಯಣ ಗೌಡ (3ನೇ ಪುಟಕ್ಕೆ)

### ರೇಷ್ಮೆ ಜಮೀನು ಉಳಿಸಿಕೊಳ್ಳಿ

ಚನ್ನಗಿರಿ ಬಿ.ಆರ್.ಟಿ. ಕಾಲೋನಿಯಲ್ಲಿ ರೇಷ್ಮೆ ಇಲಾಖೆಯ 33 ಎಕರೆ ಜಮೀನನ್ನು ಬೇಲಿ ಹಾಕಿ ಹದ್ದುಬಸ್ತು ಮಾಡಿಕೊಳ್ಳುವಂತೆ ಸಚಿವ ನಾರಾಯಣ ಗೌಡ ಸೂಚಿಸಿದ್ದಾರೆ.

ಇಲಾಖೆ ಸಾಕಷ್ಟು (3ನೇ ಪುಟಕ್ಕೆ)

## ಎನ್‌ಪಿಎ ಘೋಷಣೆ ಅವಧಿ ವಿಸ್ತರಣೆ

ನವದೆಹಲಿ, ಸೆ. 11 - ಕೊರೊನಾ ಹಿನ್ನೆಲೆಯಲ್ಲಿ ಎನ್.ಪಿ.ಎ. ಘೋಷಣೆಗೆ ವಿಧಿಸಲಾಗಿದ್ದ ತಡೆಯಾಜ್ಞೆಯನ್ನು ಸುಪ್ರೀಂ ಕೋರ್ಟ್ ವಿಸ್ತರಿಸಿದ್ದು, ಮುಂದಿನ ಆದೇಶದವರೆಗೆ ಕ್ರಮ ತೆಗೆದುಕೊಳ್ಳಬಾರದು ಎಂದು ಹೇಳಿದೆ.

ಕೇಂದ್ರ ಹಾಗೂ ರಿಸರ್ವ್ ಬ್ಯಾಂಕ್‌ಗಳಿಗೆ ನೋಟಿಸ್ ಕಳಿಸಿರುವ ಸುಪ್ರೀಂ ಕೋರ್ಟ್, ಈ ವಿಷಯದ ಬಗ್ಗೆ ನಿಲುವುಗಳನ್ನು ತಿಳಿಸುವಂತೆ ಹೇಳಿದೆ. ನ್ಯಾಯಮೂರ್ತಿಗಳಾದ ಅಶೋಕ್ ಭೂಷಣ್, ಆರ್. ಸುಭಾಷ್ ರೆಡ್ಡಿ ಹಾಗೂ ಎಂ.ಆರ್. ಷಾ ಅವರನ್ನು ಒಳಗೊಂಡ ಪೀಠ ವಿಚಾರಣೆಯನ್ನು (3ನೇ ಪುಟಕ್ಕೆ)

## ಶೇ.30 ರಷ್ಟಿರುವ ಮರಾಠರನ್ನು ತುಳಿತಕ್ಕೊಳಗಾದವರು ಎನ್ನಲಾಗದು : ಸುಪ್ರೀಂ

ನವದೆಹಲಿ, ಸೆ. 10 – ಮಹಾರಾಷ್ಟ್ರದಲ್ಲಿ ಮರಾಠ ಸಮುದಾಯ ಶೇ.30ರಷ್ಟು ಜನಸಂಖ್ಯೆ ಹೊಂದಿದ್ದು, ಇವರನ್ನು ತುಳಿತಕ್ಕೊಳಗಾದವರ ಜೊತೆ ಹೋಲಿಕೆ ಮಾಡಲಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ. 2018ರಲ್ಲಿ ರಾಜ್ಯ ಸರ್ಕಾರ ಮರಾಠ ಸಮುದಾಯಕ್ಕೆ ನಿಗದಿಪಡಿಸಿದ್ದ ಮೀಸಲಾತಿಗೆ ತಡೆಯಾಜ್ಞೆ ಹೊರಡಿಸುವ ಆದೇಶದಲ್ಲಿ ನ್ಯಾಯಾಲಯ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಸುಪ್ರೀಂ ಕೋರ್ಟ್ 1992ರಲ್ಲಿ ನಿಗದಿ ಪಡಿಸಿದ್ದ ಶೇ.50ರ ಮೀಸಲಾತಿ ಮಿತಿಯನ್ನು ಮೀರಿ ಮರಾಠರಿಗೆ ಮೀಸಲಾತಿ ಕಲ್ಪಿಸುವ ಯಾವುದೇ ಅಸಾಧಾರಣ ಪರಿಸ್ಥಿತಿಯನ್ನು ಮಹಾರಾಷ್ಟ್ರ ಸರ್ಕಾರ ಮೇಲ್ನೋಟಕ್ಕೆ ಕಂಡು ಬರುವಂತೆ ತಿಳಿಸಿಲ್ಲ ಎಂದು ನ್ಯಾಯಾಲಯ ಹೇಳಿದೆ.

## ರಾಜ್ಯದ 23 ಜಿಲ್ಲೆಗಳ 130 ತಾಲ್ಲೂಕುಗಳು ಪ್ರವಾಹ ಪೀಡಿತ

### ಆಗಸ್ಟ್ ಮಳೆ, ಪ್ರವಾಹ ಆಧರಿಸಿ ರಾಜ್ಯ ಸರ್ಕಾರದ ಘೋಷಣೆ

ಬೆಂಗಳೂರು, ಸೆ. 10 - ಆಗಸ್ಟ್ ತಿಂಗಳಲ್ಲಿ ಸುರಿದ ಅತಿವೃಷ್ಟಿ ಹಾಗೂ ಪ್ರವಾಹ ಹಿನ್ನೆಲೆಯಲ್ಲಿ ರಾಜ್ಯದ 23 ಜಿಲ್ಲೆಗಳ 130 ತಾಲ್ಲೂಕುಗಳನ್ನು ಅತಿವೃಷ್ಟಿ ಪೀಡಿತ ತಾಲ್ಲೂಕುಗಳೆಂದು ರಾಜ್ಯ ಸರ್ಕಾರ ಘೋಷಣೆ ಮಾಡಿದೆ. ಪ್ರವಾಹ ಪೀಡಿತ ಈ ಪ್ರದೇಶಗಳಲ್ಲಿ ಪರಿಹಾರ ಕಾರ್ಯಗಳನ್ನು ಕೈಗೊಳ್ಳುವಂತೆ ಸ್ಥಳೀಯ ಆಡಳಿತಕ್ಕೆ ತಿಳಿಸಲಾಗಿದೆ.

ರಾಜ್ಯ ವಿಕೋಪ ನಿರ್ವಹಣಾ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ ಸರ್ಕಾರ ಈ ಘೋಷಣೆ ಮಾಡಿದೆ. ಭಾರೀ ಮಳೆಯಿಂದಾಗಿ ಜೀವ ಹಾನಿಯಾಗಿದೆ. ಮಳೆ - ಬೆಳೆ ನಾಶವಾಗುವ ಜೊತೆಗೆ ಆಸ್ತಿಗಳಿಗೆ ಹಾನಿಯಾಗಿದೆ ಎಂದು ತಿಳಿಸಲಾಗಿದೆ.

ಎಸ್.ಡಿ.ಆರ್.ಎಫ್. ಹಾಗೂ ಎನ್.ಡಿ.ಆರ್.ಎಫ್. ನಿಯಮಗಳ ಅನ್ವಯ ಜನರಿಗೆ ನೆರವು ನೀಡಲು ಕ್ರಮ ತೆಗೆದುಕೊಳ್ಳಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಧಾರಾಕಾರ ಮಳೆಯ ಜೊತೆಗೆ ಮಹಾರಾಷ್ಟ್ರದಿಂದ ಕೃಷ್ಣಾ ಕಣಿವೆ ಪ್ರದೇಶಕ್ಕೆ ಹೆಚ್ಚಿನ ನೀರು ಹರಿದಿರುವುದರಿಂದ ಉತ್ತರ ಭಾಗದಲ್ಲಿ ಪ್ರವಾಹ ಉಂಟಾಗಿದೆ. ಕರಾವಳಿ ಹಾಗೂ ಮಲೆನಾಡು ಭಾಗದಲ್ಲೂ (2ನೇ ಪುಟಕ್ಕೆ)

## ಬಡ್ಡಿ ಮನ್ನಾ ಕುರಿತು ಕೇಂದ್ರದಿಂದ ಸಮಿತಿ

ನವದೆಹಲಿ, ಸೆ. 10 - ಕೊರೊನಾ ಹಿನ್ನೆಲೆಯಲ್ಲಿ ಮುಂದೂಡಲಾದ ಕಂತುಗಳ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವ ಕುರಿತು ಪರಿಶೀಲಿಸಲು ಮಾಜಿ ಸಿಎಜಿ ರಾಜೀವ್ ಮಹರ್ಷಿ ಅವರ ನೇತೃತ್ವದಲ್ಲಿ ಪರಿಣಿತರ ಸಮಿತಿ ರಚಿಸಿರುವುದಾಗಿ ಕೇಂದ್ರ ಸರ್ಕಾರ ಪ್ರಕಟಿಸಿದೆ. (2ನೇ ಪುಟಕ್ಕೆ)


## ಆರ್‌ಎಟಿಯಲ್ಲಿ ನೆಗೆಟಿವ್ ಇದ್ದರೆ ಆರ್‌ಟಿ-ಪಿಸಿಆರ್ ಪರೀಕ್ಷೆ

### ರೋಗ ಲಕ್ಷಣ ಇರುವವರ ಪರೀಕ್ಷೆಗೆ ಕೇಂದ್ರ ಸೂಚನೆ

ನವದೆಹಲಿ, ಸೆ. 10 - ಆರ್.ಎ.ಟಿ. ಪರೀಕ್ಷೆಯಲ್ಲಿ ನೆಗೆಟಿವ್ ಬಂದ ರೋಗ ಲಕ್ಷಣ ಇರುವ ಎಲ್ಲರನ್ನೂ ಆರ್‌ಟಿ - ಪಿಸಿಆರ್ ಪರೀಕ್ಷೆಗೆ ಒಳಪಡಿಸುವಂತೆ ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

ಕೊರೊನಾ ರೋಗ ಲಕ್ಷಣ ಹೊಂದಿದ್ದರೂ ಆರ್.ಎ.ಟಿ. ಪರೀಕ್ಷೆಯಲ್ಲಿ ನೆಗೆಟಿವ್ ಬಂದವರನ್ನು ಪರೀಕ್ಷಿಸುವ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಅಧಿಕಾರಿಗಳು ಇಲ್ಲವೇ ತಂಡಗಳನ್ನು ನಿಯೋಜಿಸಬೇಕು ಎಂದೂ ಸಹ ಸಚಿವಾಲಯ ಹೇಳಿದೆ. (2ನೇ ಪುಟಕ್ಕೆ)


ಚಂದ್ರಪ್ಪರ ಹಾಲಸಿದ್ದಪ್ಪ ಯರಗುಂಟೆ ನಿಧನ



ಗದಗ ಸಿಟಿ ಎಪಿಎಂಸಿ ಮಾರುಕಟ್ಟೆ ನಿವೃತ್ತ ಸಹಾಯಕ ಕಾರ್ಯದರ್ಶಿ
ಶ್ರೀ ಚಂದ್ರಪ್ಪರ ಹಾಲಸಿದ್ದಪ್ಪ ಯರಗುಂಟೆ
ಅವರು ದಿನಾಂಕ 10.09.2020ರ ಗುರುವಾರ ಬೆಳಿಗ್ಗೆ 8 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 79 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 10.09.2020ರ ಗುರುವಾರ ಮಧ್ಯಾಹ್ನ 2 ಗಂಟೆಗೆ ಯರಗುಂಟೆಯ ಅವರ ಜಮೀನಿನಲ್ಲಿ ನೆರವೇರಿಸಲಾಯಿತು.

ದುಃಖತಪ್ತ ಕುಟುಂಬ ವರ್ಗ
ಶ್ರೀಮತಿ ಸುಶೀಲಮ್ಮ ಹಾಲಸಿದ್ದಪ್ಪ ಮತ್ತು ಮಕ್ಕಳು,
ಮೊಮ್ಮಕ್ಕಳು, ಸೊಸೆಯಂದಿರು
ಚಂದ್ರಪ್ಪರ ಬಿ. ವೀರಪ್ಪ ಹಾಗೂ ಸಹೋದರರು, ಮಕ್ಕಳು,
ಮೊಮ್ಮಕ್ಕಳು ಹಾಗೂ ಬೂದಿಹಾಳ್ ವಂಶಸ್ಥರು, ಯರಗುಂಟೆ.
ಮೊ. : 94811 62562, 99720 89895



॥ ಶ್ರೀ ಕುರುವತ್ತಿ ಬಸವೇಶ್ವರ ಪ್ರಸನ್ನ ॥ ॥ ಶ್ರೀ ಶ್ರೀಶೈಲ ಮಲ್ಲಿಕಾರ್ಜುನ ಪ್ರಸನ್ನ ॥

ಕೈಲಾಸ ಶಿವಗಣಾರಾಧನೆಯ ಆಹ್ವಾನ ಪತ್ರಿಕೆ

ದಾವಣಗೆರೆ ಎಸ್. ಎಸ್. ಬಡಾವಣೆ ವಾಸಿ
ಎಲೆಬೇತೂರು ದಿ॥ ಎಂ.ಪುಟ್ಟಬಸಪ್ಪನವರ ಧರ್ಮಪತ್ನಿ
ಶ್ರೀಮತಿ ಮಂಜುಳಮ್ಮ ಪುಟ್ಟಬಸಪ್ಪ ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.



ದಿನಾಂಕ .03.09.2020 ನೇ ಗುರುವಾರ ರಾತ್ರಿ 9-45 ಗಂಟೆಗೆ ನನ್ನ ಮಗನಾದ
ಶ್ರೀ ಶರಣ ಬಿ.ಪಿ. ಮಾದೇವ್ ರವರು
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು
ದಿನಾಂಕ 11-09-2020ರ ಶುಕ್ರವಾರ ಬೆಳಿಗ್ಗೆ 11-00 ಗಂಟೆಗೆ "ಮಾಳಗಿ ಮನೆ" 1889/1, 1ನೇ ಮೇನ್, 1ನೇ ಕ್ರಾಸ್, ಎಸ್. ಎಸ್. ಬಡಾವಣೆ, ದಾವಣಗೆರೆ. ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ಮಂಜುಳಮ್ಮ ಪುಟ್ಟಬಸಪ್ಪ ಮತ್ತು ಮಕ್ಕಳು
ಮೆ॥ ನಂದಿ ಸಿಮೆಂಟ್ಸ್ ಮತ್ತು ಮೆ॥ ನಂದಿ ಸ್ಟೀಲ್ಸ್, ದಾವಣಗೆರೆ.
ಮೊಮ್ಮಕ್ಕಳು, ಮಾಳಗಿ ವಂಶಸ್ಥರು ಹಾಗೂ ಬಂಧು-ಮಿತ್ರರು.

**ಮನೆ ಬಾಡಿಗೆಗೆ / ಲೀಸ್ ಗೆ ಇವೆ**
ಆಧುನಿಕ ಸೌಲಭ್ಯವುಳ್ಳ ಸಿಂಗಲ್ ಮತ್ತು ಡಬಲ್ ಬೆಡ್ ರೂಂ ಮನೆ ಲೀಸ್ / ಬಾಡಿಗೆಗೆ ಸಿಗುತ್ತದೆ. # 91/99/537, ತರಳಬಾಳು ಕೃಪ, 1ನೇ ಮೇನ್, 5ನೇ ಕ್ರಾಸ್, ಡಿಸಿಎಂ ಟೌನ್ ಶಿಪ್, ದಾವಣಗೆರೆ.
99020-45143, 94807-12538

**ಮನೆ ಕಟ್ಟಿಕೊಡಲಾಗುವುದು**
SSS ಎಂಟರ್ ಪ್ರೈಸಸ್ ಇವರಿಂದ ಭಾರೀ ಕಡಿಮೆ ದರದಲ್ಲಿ ಮನೆ ಕಟ್ಟಿಕೊಡಲಾಗುವುದು.
ಆವರಗೆರೆ ಹುಂಡೈ ಶೋ ರೂಂ ಪಕ್ಕ, 20×30 ಸೈಟ್‌ನಲ್ಲಿ ಮನೆ ಕೇವಲ 21 ಲಕ್ಷಕ್ಕೆ ಕಟ್ಟಿಕೊಡಲಾಗುವುದು. ಸಂಪರ್ಕಿಸಿ : ಪಠಾಣ್,
8139988555, 96323 00009
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.

**ಮನೆ ಮಾರಾಟಕ್ಕಿದೆ**
ಯರಗುಂಟೆ ವಾರ್ಡ್ ನಂ 45ರಲ್ಲಿ ಹೊಸದಾಗಿ ಕಟ್ಟಿಸಿರುವ 30x40 ಅಡಿ ಅಳತೆಯ 2 ಬೆಡ್ ರೂಂ, ಬೋರ್ ವೆಲ್/ ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ ಪಶ್ಚಿಮ ದಿಕ್ಕಿನ ಸುಸಜ್ಜಿತ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ.
9844958093, 9844779947

**ಮನೆ ಲೀಜ್‌ಗೆ ಇದೆ**
ಕುಂದುವಾಡ ರೋಡ್‌ನಲ್ಲಿರುವ (ವಾಟರ್ ಟ್ಯಾಂಕ್ ಹತ್ತಿರ) ಕಮ್ಮಾರಿ ಸಮುದಾಯ ಭವನ ಹಿಂಭಾಗ, ಬಸವೇಶ್ವರ ಲೇಔಟ್, 7ನೇ ಕ್ರಾಸ್, 1ನೇ ಫ್ಲೋರ್, (20x60) 3 ಬೆಡ್ ರೂಂ, 2ನೇ ಫ್ಲೋರ್, 1 ಬೆಡ್ ರೂಂ ಇರುವ ಉತ್ತರ ದಿಕ್ಕಿನ ಮನೆಗಳು ಲೀಜಿಗೆ ಇವೆ. (ಮಧ್ಯವರ್ತಿಗಳಿಗೆ ಅವಕಾಶವಿಲ್ಲ) ಸಂಪರ್ಕಿಸಿ:
97318 31987

**ಆಯುರ್ವೇದ ವೈದ್ಯರು ಬೇಕಾಗಿದ್ದಾರೆ**
ಬಿ.ಎ.ಎಮ್.ಎಸ್ ಮುಗಿಸಿದ ಆಯುರ್ವೇದ ವೈದರು ಪ್ರತಿಷ್ಠಿತ ಆಯುರ್ವೇದ ಆಸ್ಪತ್ರೆಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ (ಮಹಿಳಾ ವೈದ್ಯರಿಗೆ ಪ್ರಾತಿನಿಧ್ಯ) ನೇರ ಸಂದರ್ಶನಕ್ಕೆ ಸಂಪರ್ಕಿಸಿ: 08192 252228
86186 42929

**ಸೈಟು ಮಾರಾಟಕ್ಕಿದೆ**
30x50 ಉತ್ತರ, 50x54 ಉತ್ತರ ಪಶ್ಚಿಮ ಕಾರ್ನರ್
**ಮನೆ ಬಾಡಿಗೆಗೆ ಇದೆ**
ಇಂಡಿಪೆಂಡೆಂಟ್
4 BHK DCM Township
3 BHK S.S. Layout
78927 93994, 98453 52460

**ಮನೆ ಬಾಡಿಗೆಗೆ ಇದೆ**
ಬನಶಂಕರಿ ಬಡಾವಣೆ ಹಿಂಭಾಗ, ನೂತನವಾಗಿ ಕಟ್ಟಿಸಿರುವ ಡಬಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ.
98804 40541
99644 14243

**ಬೇಕಾಗಿದ್ದಾರೆ**
✦ ಸೇಲ್ಸ್ ಎಕ್ಸಿಕ್ಯೂಟಿವ್ಸ್
✦ ಆಫೀಸ್ ಬಾಯ್ಸ್
ಸಂಪರ್ಕಿಸಿ : ವಿದ್ಯಾನಗರ ಮೇನ್ ರೋಡ್, ದಾವಣಗೆರೆ.
98867 09334

**ಮಾರಾಟಕ್ಕೆ**
S.S ಲೇಔಟ್ ಮನೆ-30×40(35 ಸಾವಿರ ಬಾಡಿಗೆ ಬರುವಂತಹ ಮನೆ) ಕೊಟ್ಟೂರೇಶ್ವರ ಬಡಾವಣೆ ಮನೆ-20×35, ಮೇಡಂ ಲೇಔಟ್ ಮನೆ 30×40, ಡಿಸಿಎಂ ಟೌನ್ ಮನೆ-40×50 ರವೀಂದ್ರನಾಥ ಬಡಾವಣೆ ಸೈಟ್-30×50, KHB ಸೈಟ್ - 30×40, ಬನಶ್ರೀ ಲೇಔಟ್ ಸೈಟ್ (ಶ್ಯಾಮನೂರು) 30×40, 30×42 ( ಸೈಟ್ ದರ ಹಳೆಯ ಆರ್ ಸಿ ಸಿ ಮನೆ ನಿಟುವಳ್ಳಿ ಹೊಸ ಬಡಾವಣೆ)
ಸಂಪರ್ಕಿಸಿ: 7899636597
9916525828

**Future Maker Life Care (Haryana) and**
Social trade (Ablaze info Solution)
People who lost money, please Contact for legal action+support
PRASANNA 80738 29135, 80954 56388

**ತುರ್ತಾಗಿ ಬೇಕಾಗಿದ್ದಾರೆ**
ಶ್ರೀ ಲಕ್ಷ್ಮೀ ಜೆರಾಕ್ಸ್ ಸೆಂಟರ್‌ಗೆ
ಮಹಿಳಾ ಡಿ.ಟಿ.ಪಿ. ಆಪರೇಟರ್ ತುರ್ತಾಗಿ ಬೇಕಾಗಿದ್ದಾರೆ. ಆಸಕ್ತರು ಕೂಡಲೇ ಸಂಪರ್ಕಿಸಿರಿ.
89516 95865
91644 89976

**2 ಮನೆ ಹಾಗೂ ಆಫೀಸ್ ಮಳಿಗೆ ಬಾಡಿಗೆಗೆ ಇದೆ**
ದಾವಣಗೆರೆ ವಿಜಯಲಕ್ಷ್ಮಿ ರಸ್ತೆಯಲ್ಲಿ 2ನೇ ಮಹಡಿಯಲ್ಲಿ 2 ಬೆಡ್ ರೂಂನ ಮನೆ ಹಾಗೂ 1 ಬೆಡ್ ರೂಂ ನ ಮನೆ ಮತ್ತು 18x12 ಅಳತೆಯ ಆಡಿಟರ್, ಲಾಯರ್, ಫೈನಾನ್ಸ್‌ಗೆ ಸೂಕ್ತವಾದ ಆಫೀಸ್ ಬಾಡಿಗೆಗೆ ಇದೆ.
98863 20025, 98860 97065

**V.S. PARAMEDICAL COLLEGE**
SSLC ಪಾಸ್/PUC- 'ಪಾಸ್ or ಫೇಲ್ ಆಗಿದ್ದೀರಾ ಚಿಂತಿಸಬೇಡಿ' Course (DIPLOMA HEALTH INSPECTOR (DHI) ಕೆಲವೇ ಸೀಟುಗಳು ಮಾತ್ರ
SBI ATM ಹತ್ತಿರ, ರಾಮ್ ಅಂಡ್ ಕೋ ಸರ್ಕಲ್, ದಾವಣಗೆರೆ.
9019580600, 8660195955

**House For Rent Long Term & Short Term Available**
with all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451

**FURNISHED ROOM TO-LET**
Employees Or Students
Near Athani College
S.S. Layout 'A' Block
98443 34492


# ಹಂದಿಗಳನ್ನು ಸ್ಥಳಾಂತರಿಸಲು ಒತ್ತಾಯಿಸಿ ಪ್ರತಿಭಟನೆ

ಹರಪನಹಳ್ಳಿ, ಸೆ.10- ಪಟ್ಟಣದಲ್ಲಿನ ಹಂದಿಗೂಡುಗಳನ್ನು ಪಟ್ಟಣದ ಹೊರ ವಲಯಕ್ಕೆ ಸ್ಥಳಾಂತರಿಸಬೇಕು ಎಂದು ಒತ್ತಾಯಿಸಿ ಸಂಡೂರುಗೇರಿ, ಸುಣಗಾರಗೇರಿ, ಕುರುಬಗೇರಿ, ಪಠಾಣಗೇರಿಯ ನಿವಾಸಿಗಳು ಪುರ ಸಭೆಯ ಆವರಣದಲ್ಲಿ ಹಂದಿಗಳ ದಾಳಿಯಿಂದ ಸಾವನ್ನಪ್ಪಿದ ಕುರಿಯನ್ನಿಟ್ಟುಕೊಂಡು ಪ್ರತಿಭಟನೆ ನಡೆಸಿ, ಮುಖ್ಯಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈ ವೇಳೆ ಆರ್.ಟಿ.ಐ ಕಾರ್ಯಕರ್ತ ಜೆ. ಕೆಂಚಪ್ಪ ಮಾತನಾಡಿ, ಪಟ್ಟಣದ ಸಂಡೂರುಗೇರಿ, ಸುಣಗಾರಗೇರಿ, ಕುರುಬಗೇರಿ, ಪಠಾಣಗೇರಿಗಳಲ್ಲಿ ಹಂದಿಗಳ ಹಾವಳಿ ವಿಪರೀತವಾಗಿದ್ದು, ಮನೆಯ ಮುಂದೆ ಕಟ್ಟಿದ ಕುರಿಗಳ ಮೇಲೆ, ಆಕಳು-ಎಮ್ಮೆಗಳು, ಎಮ್ಮೆ-ಕರುಗಳ ಮೇಲೆ ದಾಳಿ ಮಾಡಿ ತಿಂದು ಹಾಕುತ್ತಿವೆ. ಹಾಗೆಯೇ ಊರ ಪಕ್ಕದಲ್ಲಿ ಬೆಳೆದು ನಿಂತ ಬೆಳೆಗಳನ್ನು ಗುಂಪು ಗುಂಪಾಗಿ ಬಂದು ನಾಶ ಮಾಡುತ್ತಿವೆ. ಇದರಿಂದ ರೈತರು ತುಂಬಾ ತೊಂದರೆಗೆ ಒಳಗಾಗುತ್ತಿದ್ದಾರೆ.


ಹರಪನಹಳ್ಳಿ

ಈ ಹಿಂದೆ ಪಟ್ಟಣದಲ್ಲಿ ಹಂದಿಗಳು ಮಕ್ಕಳು ಮತ್ತು ಜನ - ಜಾನುವಾರುಗಳ ಮೇಲೆ ದಾಳಿ ಮಾಡಿರುವುದನ್ನು ಖಂಡಿಸಿ ಅನೇಕ ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ ಎಂದು ವ್ಯಾಕುಲತೆ ವ್ಯಕ್ತಪಡಿಸಿದರು.

ಪುರಸಭೆ ಹಿರಿಯ ಆರೋಗ್ಯ ನಿರೀಕ್ಷಕ ಮಂಜುನಾಥ್ ಮನವಿ ಸ್ವೀಕರಿಸಿ ಮಾತನಾಡಿ, ಹಂದಿಗಳ ಮಾಲೀಕರನ್ನು ಕರೆಸಿ 15 ದಿನಗಳ ಒಳಗಾಗಿ ಹಂದಿಗಳನ್ನು ಸ್ಥಳಾಂತರಿಸಲು ಕ್ರಮ ಕೈಗೊಳ್ಳುತ್ತೇವೆ ಎಂದು ಭರವಸೆ ನೀಡಿದರು.

### ಹಂದಿಗಳ ಹಾವಳಿ...

ಊರಿನ ಮಧ್ಯದಲ್ಲಿನ ಹಂದಿಗಳ ಗೂಡು ನಿರ್ಮಾಣ ಮಾಡಿರುವುದರಿಂದ ಹಂದಿಗಳು ಬೇಕಾಬಿಟ್ಟಿಯಾಗಿ ಬೀಡು ಬಿಟ್ಟಿವೆ. ಇದರಿಂದಾಗಿ ರೈತರು, ಜನ, ಜಾನುವಾರು ಬೆಳೆದು ನಿಂತ ಪೈರನ್ನು ತೆಗೆದುಕೊಳ್ಳುವುದು ಕಷ್ಟವಾಗಿದೆ. ಅದಕ್ಕಾಗಿ ಈ ಹಿಂದೆ ಸರ್ಕಾರವು ಹಂದಿ ಸಾಕಾಣಿಕೆಗೆ ಅನಂತನಹಳ್ಳಿ ಬಳಿ ಹಂದಿ ಕಾಯುವವರಿಗಾಗಿಯೇ ಮಂಜೂರು ಮಾಡಿದ ಜಮೀನಿಗೆ ಸ್ಥಳಾಂತರಿಸಬೇಕು.

**- ಗಣೇಶ್**, ಪುರಸಭಾ ಸದಸ್ಯರು

ಈ ಪ್ರತಿಭಟನೆಯಲ್ಲಿ ಶಿಕಾರಿ ಬಾಲಪ್ಪ, ಇದ್ಲಿ ರಾಮಪ್ಪ, ಎಸ್.ರವಿ, ಸಿ.ನಾಗರಾಜ್, ಹೆಚ್.ಪರಸಪ್ಪ, ಅಬ್ದುಲ್ ಅಜೀಜ್, ಇ. ತಿಮ್ಮಪ್ಪ, ಜಿ.ಗೋಣೆಪ್ಪ ಸೇರಿದಂತೆ ಇತರರಿದ್ದರು.


**ಬೇಕಾಗಿದ್ದಾರೆ**
1) Cashier
2) Salesman / Sales Girls
ಸಂಪರ್ಕಿಸಿ :
ಗಂಗಾವತಿ ಸ್ಕಿಲ್ ಸ್ಟ್ಯಾರಿ ಸೆಂಟರ್
ಬಿನ್ನಿ ಕಂಪನಿ ರಸ್ತೆ, ದಾವಣಗೆರೆ.

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ವಿದ್ಯಾನಗರ 1ನೇ ಬಸ್ ಸ್ಟಾಪ್ ಬಳಿ ಕೆನರಾ ಬ್ಯಾಂಕ್ ಎದುರು 60x40 ಅಳತೆಯಲ್ಲಿರುವ ಕಟ್ಟಡದ 1ನೇ ಮಹಡಿಯಲ್ಲಿ 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ)
94484 63388

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯತ
ವಧು-ವರರ ಕೇಂದ್ರ,
Vidya Nagara, Nutan College Road, Davangere.
Web.: www.bhoomikamatrimony.com
7760316576, 9008055813

**ರಿಪೇರಿ/ಸರ್ವೀಸ್**
ಎಲ್ಲಾ ಕಂಪನಿಯ UPS/Battery /ROಗಳನ್ನು ತಕ್ಷಣವೇ ರಿಪೇರಿ ಮಾಡಿಕೊಡಲಾಗುವುದು.
(ONLINE and OFFLINE)
ಪೀಸ್ ಎಂಟರ್‌ಪ್ರೈಸಸ್
9901318277, 8310042490

**ನೇರ ಪರೀಕ್ಷೆಗಳು**
PUC, ARTS, COMMERCE, SCIENCE ಮತ್ತು SSLC
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ.
ಮಾನಸ ಎಜುಕೇಷನ್ ಟ್ರಸ್ಟ್,
ಎಲ್.ಕೆ. ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ಉದ್ಯೋಗಕ್ಕಾಗಿ ಶಿಕ್ಷಣ**
SSLC, PUC, ITI Pass/Fail
ಡಿಪ್ಲೋಮಾ ಪೇಷೆಂಟ್ ಕೇರ್, ನರ್ಸಿಂಗ್ ತರಬೇತಿ ನಂತರ ತಕ್ಷಣ ಕೆಲಸ.
NTC, SSLC, PUC ಕರೆಸ್ಪಾಂಡೆನ್ಸ್ ಕೋರ್ಸ್
ಗಂಗೋತ್ರಿ ಕಮ್ಯುನಿಟಿ ಕಾಲೇಜ್,
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
86602 35013

**ಪ್ರವೇಶ ಪ್ರಕಟಣೆ**
SSLC, PUC, ITI - Pass/Fail
ಡಿಪ್ಲೋಮಾ ಇನ್ ಪೇಷಂಟ್ ಕೇರ್ ನರ್ಸಿಂಗ್ - 2 ವರ್ಷ
6 ತಿಂಗಳ ತರಬೇತಿ ನಂತರ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಮಾನಸ ಕಮ್ಯೂನಿಟಿ ಕಾಲೇಜ್
ಎಲ್.ಕೆ. ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ISI ಹೊಂದಿರುವ**
Vega Helmet ಹೋಲ್‌ಸೇಲ್ ದರದಲ್ಲಿ ದೊರೆಯುತ್ತದೆ.
ಕಿರಣ್ ಜನರಲ್ ಸ್ಟೋರ್
ಮಂಡಿಪೇಟೆ, ಎಂ.ಜಿ. ರೋಡ್, ಭವಾನಿ ಬುಕ್ ಡಿಪೋ ಕೆಳಗಡೆ, ದಾವಣಗೆರೆ.

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869


## ಕಸ ವಿಲೇವಾರಿಗೆ ಸೂಚನೆ

**(1ನೇ ಪುಟದಿಂದ)** ಮಾಡದ ಕಂದಾಯ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಕಂದಾಯ ಪಾವತಿಸದವರ ವಿದ್ಯುತ್ ಹಾಗೂ ನೀರಿನ ಸಂಪರ್ಕ ಕಡಿತಗೊಳಿಸಿ ಎಂದು ಸಚಿವರು ತಿಳಿಸಿದರು.

**ಖಾತೆಗೆ ವರದಿ :** ರಾಜ್ಯಾದ್ಯಂತ ನಗರಾಭಿವೃದ್ಧಿ ಪ್ರಾಧಿಕಾರಗಳ ಹೊರತಾದ ಬಡಾವಣೆಗಳಿಗೆ ಡೋರ್ ನಂಬರ್ ನೀಡಿಲ್ಲ. ಈ ಸಮಸ್ಯೆಯ ಬಗ್ಗೆ ಜಿಲ್ಲಾಧಿಕಾರಿಗಳ ಮೂಲಕ ವರದಿ ಕಳಿಸಬೇಕು. ಡೋರ್ ನಂಬರ್‌ಗಾಗಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದವರು ಇದೇ ಸಂದರ್ಭದಲ್ಲಿ ಹೇಳಿದರು.

ಸಭೆಯಲ್ಲಿ ಹರಿಹರ ಶಾಸಕ ರಾಮಪ್ಪ, ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ನಜ್ಮಾ, ಜಿ.ಪಂ. ಉಪ ಕಾರ್ಯದರ್ಶಿ ಆನಂದ್, ರೇಷ್ಮೆ ಇಲಾಖೆ ಉಪ ನಿರ್ದೇಶಕರಾದ ನಿರ್ಮಲ, ರೇಷ್ಮೆ ಇಲಾಖೆ ಸಹಾಯಕ ನಿರ್ದೇಶಕ ಶ್ರೀಹರ್ಷ ಮತ್ತಿತರರು ಉಪಸ್ಥಿತರಿದ್ದರು.

## ಹೆಲ್ಮೆಟ್ ಅಲ್ಲ

**(1ನೇ ಪುಟದಿಂದ)** ಗುಣಮಟ್ಟದ ಹೆಲ್ಮೆಟ್ ಧರಿಸಲು ನಾವು ಜನರಿಗೆ ಒಂದು ವಾರದ ಸಮಯವನ್ನೂ ನೀಡಿದ್ದೇವೆ. ಒಳ್ಳೆಯ ಹೆಲ್ಮೆಟ್ ಅನ್ನು ಜನರು ಖರೀದಿಸಬೇಕು ಎಂದು ಎಸ್ಪಿ ತಿಳಿಸಿದ್ದಾರೆ.

ಹಾಫ್ ಹೆಲ್ಮೆಟ್ ಧರಿಸುವುದನ್ನು ಪೊಲೀಸರು ತಡೆಯಲು ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಬುಧವಾರ ಒಂದೇ ದಿನ 650ಕ್ಕೂ ಹೆಚ್ಚು 'ಪ್ಲಾಸ್ಟಿಕ್ ಟೋಪಿ'ಗಳನ್ನು ಪೊಲೀಸರು ಬೈಕ್ ಸವಾರರಿಂದ ಪಡೆದುಕೊಂಡು, ಐ.ಎಸ್.ಐ. ಗುಣಮಟ್ಟದ ಹೆಲ್ಮೆಟ್ ಖರೀದಿಸಲು ಎಚ್ಚರಿಕೆ ನೀಡಿದ್ದರು.

## ಆರ್‌ಟಿ-ಪಿಸಿಆರ್ ಪರೀಕ್ಷೆ

**(1ನೇ ಪುಟದಿಂದ)** ಈ ತಂಡಗಳು ಪ್ರತಿನಿತ್ಯ ಆರ್.ಎ.ಟಿ. ಪರೀಕ್ಷೆಗಳನ್ನು ಪರಿಶೀಲಿಸಬೇಕು. ಲಕ್ಷಣ ಹೊಂದಿದವರಿಗೆ ನೆಗೆಟಿವ್ ಬಂದಾಗ ಮರು ಪರೀಕ್ಷೆಯಲ್ಲಿ ವಿಳಂಬವಾಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಲಾಗಿದೆ.

ಕೆಲ ದೊಡ್ಡ ರಾಜ್ಯಗಳಲ್ಲಿ ರೋಗ ಲಕ್ಷಣ ಹೊಂದಿದವರು ಆರ್.ಎ.ಟಿ. ಪರೀಕ್ಷೆಗೆ ಒಳಗಾದಾಗ ಅವರನ್ನು ಆರ್‌ಟಿ - ಪಿಸಿಆರ್ ಪರೀಕ್ಷೆಗೆ ಒಳಪಡಿಸದೇ ಇರುವುದು ಕಂಡುಬಂದಿದೆ ಎಂದು ಸಚಿವಾಲಯ ಹೇಳಿದೆ.

ಕೆಮ್ಮು, ಜ್ವರ ಇಲ್ಲವೇ ಉಸಿರಾಟದ ಸಮಸ್ಯೆ ಇರುವವರಿಗೆ ಆರ್‌ಎಟಿ ಪರೀಕ್ಷೆ ನಡೆಸಿದಾಗ ನೆಗೆಟಿವ್ ಬಂದರೆ ಅವರನ್ನು ಆರ್‌ಟಿ - ಪಿಸಿಆರ್ ಪರೀಕ್ಷೆಗೆ ಒಳಪಡಿಸಬೇಕು ಎಂದು ಐಸಿಎಂಆರ್ ಹಾಗೂ ಕೇಂದ್ರ ಆರೋಗ್ಯ ಸಚಿವಾಲಯದ ಮಾರ್ಗಸೂಚಿಗಳಲ್ಲೂ ತಿಳಿಸಲಾಗಿದೆ.

ಅಲ್ಲದೇ, ಆರ್.ಎ.ಟಿ. ಪರೀಕ್ಷೆ ನಡೆಸಿದಾಗ ನೆಗೆಟಿವ್ ಬಂದು, ಆನಂತರದಲ್ಲಿ ಎರಡು ಇಲ್ಲವೇ ಮೂರು ದಿನಗಳ ನಂತರ ರೋಗ ಲಕ್ಷಣಗಳು ಕಂಡು ಬಂದರೆ ಅವರನ್ನೂ ಆರ್.ಟಿ. - ಪಿಸಿಆರ್ ಮರು ಪರೀಕ್ಷೆಗೆ ಒಳಪಡಿಸಬೇಕೆಂದು ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

## ತಾಲ್ಲೂಕುಗಳು ಪ್ರವಾಹ ಪೀಡಿತ

**(1ನೇ ಪುಟದಿಂದ)** ಭಾರೀ ನಷ್ಟವಾಗಿದೆ ಎಂದು ತಿಳಿಸಲಾಗಿದೆ. ಬೆಳಗಾವಿ ಜಿಲ್ಲೆಯಲ್ಲಿ ಅತಿ ಹೆಚ್ಚಿನ 14 ತಾಲ್ಲೂಕುಗಳನ್ನು ಪ್ರವಾಹ ಪೀಡಿತ ಎಂದು ಘೋಷಿಸಲಾಗಿದೆ. ಚಾಮರಾಜನಗರ ಹಾಗೂ ಮಂಡ್ಯಗಳು ಅತಿ ಕಡಿಮೆ ತಲಾ ಒಂದು ಪ್ರವಾಹ ಪೀಡಿತ ತಾಲ್ಲೂಕುಗಳನ್ನು ಹೊಂದಿವೆ.

## ಬಡ್ಡಿ ಮನ್ನಾ ಕುರಿತು ಸಮಿತಿ


**(1ನೇ ಪುಟದಿಂದ)** ಬಡ್ಡಿ ಮನ್ನಾ ಕುರಿತು ನಿರ್ಧರಿಸಲು ಸಮಿತಿ ರಚಿಸುವುದಾಗಿ ಸುಪ್ರೀಂ ಕೋರ್ಟ್ ಎದುರು ಕೇಂದ್ರ ಸರ್ಕಾರ ತಿಳಿಸಿತ್ತು. ಅದರಂತೆ ಸಮಿತಿಯನ್ನು ರಚಿಸಲಾಗಿದೆ.


**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 10.9.2020ರಂದು ನಿಧನರಾದ ನಮ್ಮ ಸಂಘದ ಮಾಜಿ ಅಧ್ಯಕ್ಷರೂ, ವಕ್ಕಲಿಗರ ಪೇಟೆಯ ನಾಗನೂರು ಜ್ಯೂಯಲರಿ ಮಾಲೀಕರೂ ಆದ
**ಶ್ರೀ ವೆಂಕಟೇಶ್ ಶ್ರೀನಿವಾಸ ಶೇಟ್**
ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಕುಟುಂಬ ವರ್ಗಕ್ಕೆ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಕರುಣಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
ಪ್ರಶಾಂತ್ ವಿ.ವೆರ್ಣೇಕರ್ (ಹೆಗಡೆ), ಅಧ್ಯಕ್ಷರು
ರಾಜೀವ್ ವಿ. ವೆರ್ಣೇಕರ್ (PBV), ಉಪಾಧ್ಯಕ್ಷರು
ಕಾರ್ಯಕಾರಿ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರು.
**ದೈವಜ್ಞ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,**
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.


**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 09.09.2020ರ ಗುರುವಾರ ನಿಧನರಾದ ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ, ಹಿರಿಯರೂ, ನಮ್ಮ ಆತ್ಮೀಯರೂ ಆದ
**ಶ್ರೀ ಬಾಳೆಹೊಲದ ಮರುಳಸಿದ್ದಪ್ಪ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- ✦ ಕರೆಶಿವಪ್ಪ ಶ್ರೀ ರೇವಣಸಿದ್ದಪ್ಪ ಮತ್ತು ಮಕ್ಕಳು, ವರ್ತಕರು, ಎಪಿಎಂಸಿ ಯಾರ್ಡ್, ದಾವಣಗೆರೆ.
- ✦ ಬಾಳೆಹೊಲದ ಶ್ರೀ ಮಹೇಶ್ವರಪ್ಪ ಮತ್ತು ಮಕ್ಕಳು, ವರ್ತಕರು, ಎಪಿಎಂಸಿ ಯಾರ್ಡ್
- ✦ ಬಾಳೆಹೊಲದ ಶ್ರೀಮತಿ ಗೌರಮ್ಮ ಜಯಣ್ಣ ಮತ್ತು ಮಕ್ಕಳು
- ✦ ಬಾಳೆಹೊಲದ ಶ್ರೀ ರೇವಣಸಿದ್ದಪ್ಪ, ಶ್ರೀ ಆನಂದ ಮತ್ತು ಮಕ್ಕಳು, ವರ್ತಕರು
- ✦ ಬಾಳೆಹೊಲದ ಶ್ರೀ ಪ್ರಕಾಶ್, ನಾಗರಾಜ ಮತ್ತು ಮಕ್ಕಳು
- ✦ ಬಾಳೆಹೊಲದ ಶ್ರೀಮತಿ ಅನಸೂಯಮ್ಮ ಶೇಖರಪ್ಪ ಮತ್ತು ಮಕ್ಕಳು
- ✦ ಬಾಳೆಹೊಲದ ಶ್ರೀಮತಿ ರೇವಮ್ಮ ವಿರೂಪಾಕ್ಷಪ್ಪ ಮತ್ತು ಮಕ್ಕಳು, ಅಳಿಯಂದಿರು,
- ✦ ಬಾಳೆಹೊಲದ ಶ್ರೀ ಭರ್ಮನಗೌಡ್ರು ಮತ್ತು ಮಕ್ಕಳು ✦ ಕರೆಶಿವಪ್ಪ ಶ್ರೀ ಭರ್ಮಪ್ಪ ಮತ್ತು ಮಕ್ಕಳು, ಹರಿಹರ.
- ✦ ಕರೆಶಿವಪ್ಪ ಶ್ರೀ ನಾಗಲಿಂಗಪ್ಪ ಮತ್ತು ಮಕ್ಕಳು, ಅಳಿಯಂದಿರು
- ✦ ಕರೆಶಿವಪ್ಪ ಶ್ರೀ ಬಸಣ್ಣ ಮತ್ತು ಮಕ್ಕಳು, ಕೆ.ಹೆಚ್.ಬಿ. ಕಾಲೋನಿ
- ✦ ಕರೆಶಿವಪ್ಪ ಶ್ರೀ ಶೇಖರಪ್ಪ ಮತ್ತು ಮಕ್ಕಳು
- ✦ ಕರೆಶಿವಪ್ಪ ಶ್ರೀ ಬಸವರಾಜು, ಈಶ್ವರಪ್ಪ ಮತ್ತು ಮಕ್ಕಳು, ವರ್ತಕರು
- ✦ ಕರೆಶಿವಪ್ಪ ಶ್ರೀ ಕೆ.ಸಿ. ಧರಣೇಂದ್ರಪ್ಪ, ಕೆ.ಸಿ.ಪ್ರಕಾಶ್ ಹಾಗೂ ಮಕ್ಕಳು, ವರ್ತಕರು
- ✦ ಕರೆಶಿವಪ್ಪ ಶ್ರೀ ಜಯ್ಯಣ್ಣ ಮತ್ತು ಮಕ್ಕಳು ✦ ತೆಲಗಿ ಶ್ರೀ ಜಯಣ್ಣ ಮತ್ತು ಸಹೋದರರು, ಮಕ್ಕಳು

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 9.9.2020ರಂದು ನಿಧನರಾದ ಜಿಲ್ಲಾ ಸ್ವಾತಂತ್ರ್ಯ ಯೋಧರ ಮತ್ತು ಉತ್ತರಾಧಿಕಾರಿಗಳ ಸಂಘದ ಅಧ್ಯಕ್ಷರಾಗಿದ್ದ
**ಶ್ರೀ ಬಾಳೆಹೊಲದ ಮರುಳಸಿದ್ದಪ್ಪ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
ಗೌರವಾಧ್ಯಕ್ಷರು, ಜಿಲ್ಲಾ ಸಂಘದ ಪ್ರಧಾನ ಕಾರ್ಯದರ್ಶಿಗಳು ಖಜಾಂಚಿ, ಗೌರವ ಕಾರ್ಯದರ್ಶಿ ಹಾಗೂ ಕಾರ್ಯಕಾರಿ ಮಂಡಳಿ
ದಾವಣಗೆರೆ ಜಿಲ್ಲಾ ಸ್ವಾತಂತ್ರ್ಯ ಯೋಧರ ಮತ್ತು ಉತ್ತರಾಧಿಕಾರಿಗಳ ಸಂಘ (ರಿ.)

**ಭಾವಪೂರ್ಣ ಶ್ರದ್ಧಾಂಜಲಿ**



**ಶ್ರೀ ಹದಡಿ ನಟರಾಜ್‌ರವರು**
ನೋವು-ನಲಿವು, ಪ್ರೀತಿ-ಸ್ನೇಹ, ಹುಟ್ಟು-ಸಾವು ಇವೆಲ್ಲವುಗಳ ನಡುವಿನ ಕಗ್ಗಂಟು, ನಮ್ಮ ಬದುಕು ದೇಹವು ಮಣ್ಣಾದರೂ, ಬದುಕಿಗೆ (ಸಂಸಾರ) ಕಣ್ಣಾದವರು, ಜೊತೆಗಿದ್ದು, ಹಿತ, ಸಿಹಿ-ಕಹಿಗಳ ಉಣಬಡಿಸಿದವರು, ಜೊತೆಗಿಲ್ಲದಿದ್ದರು, ನಿಮ್ಮ ನೆನಪುಗಳು ಶಾಶ್ವತವಾಗಿ ನಮ್ಮ ಸಮಾಜ ಮತ್ತು ಶ್ರೀ ಪೀಠದಲ್ಲಿ ಸದಾ ಹಸಿರಾಗಿರುತ್ತದೆ.
**ವೀರಶೈವ ಲಿಂಗಾಯತ ಪಂಚಸಾಲಿ ಸಮಾಜ**
ದಾವಣಗೆರೆ ಜಿಲ್ಲಾ ಮಹಿಳಾ ಘಟಕ, ದಾವಣಗೆರೆ ನಗರ ಮಹಿಳಾ ಘಟಕ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳು ಹಾಗೂ ಎಲ್ಲಾ ಪದಾಧಿಕಾರಿಗಳು ಹಾಗೂ ಸದಸ್ಯರುಗಳು

**ಸಂಪರ್ಕಿಸಿರಿ**
ದಾವಣಗೆರೆ, ಹರಿಹರ, ಹರಪನಹಳ್ಳಿ, ಜಗಳೂರು, ಚನ್ನಗಿರಿ ತಾಲ್ಲೂಕುಗಳ ಗ್ರಾಮಾಂತರ ಮಾರ್ಗಗಳಿಗೆ ಬೆಳಿಗ್ಗೆ ಪತ್ರಿಕೆ ಬಂಡಲ್‌ಗಳನ್ನು ಸರಬರಾಜು ಮಾಡಲು ಸ್ವಂತ ವಾಹನ ಹೊಂದಿರುವವರು ಬೇಕಾಗಿದ್ದಾರೆ.
*ಭೇಟಿ ಸಮಯ :*
ಬೆಳಿಗ್ಗೆ 11 ರಿಂದ ಸಂಜೆ 6ರವರೆಗೆ
08192 254736

**ಶ್ರೀ ಕಾಮಾಕ್ಷಿ ಸ್ವರ್ಣ ಉಳಿತಾಯ ಯೋಜನೆ**
2ನೇ ಡ್ರಾ ನಂಬರ್
ನಂಬರ್ 640,
Preethi W/o. Siddesh
ಅತ್ಯುತ್ತಮ ಆಭರಣಕ್ಕಾಗಿ ಇಂದೇ ಭೇಟಿ ಕೊಡಿ:
ರಾಯ್ಕರ್ ಜ್ಯುವೆಲರಿ ವರ್ಕ್ಸ್ ಅಂಡ್ ಜೆಮ್ಸ್
ಶ್ರೇಷ್ಠ ಜಾತಿಯ ಅದೃಷ್ಟ ಹರಳುಗಳ, ರುದ್ರಾಕ್ಷಿಗಳ ಆಗರ
8ನೇ ಮೇನ್, ಚರ್ಚ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2. ಫೋನ್ : 08192-252589

**ಜ್ಯೋತಿಷ್ಯ**
97417 65669
ಈ ನಂಬರಿಗೆ ಕರೆ ಮಾಡಿ ನಿಮ್ಮ ಯಾವುದೇ ಸಮಸ್ಯೆಗಳಿಗೆ ಶ್ರೀ ಧರ್ಮಸ್ಥಳ ಮಂಜುನಾಥಸ್ವಾಮಿ ಪೂಜ್ಯ ಶಕ್ತಿಯಿಂದ ಹಿರಿಯ ಅರ್ಚಕರಿಂದ ವಿಶೇಷ ಪರಿಹಾರ.
ಧರ್ಮಸ್ಥಳ : ಸುಬ್ರಮಣ್ಯ ಗುರೂಜಿ



**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



**ಎಲೆಬೇತೂರು ಶಿವಲಿಂಗಪ್ಪ ಬಸಮ್ಮ ನಿಧನ**



ದಾವಣಗೆರೆ ತಾಲ್ಲೂಕು ಎಲೆಬೇತೂರು ಗ್ರಾಮದ ದಿ|| ಶಿವಲಿಂಗಪ್ಪ ನಿಂಗಪ್ಪನವರ ಧರ್ಮಪತ್ನಿ ಶ್ರೀಮತಿ ಬಸಮ್ಮ (ನಾಗಮ್ಮ) (80) ಅವರು ದಿನಾಂಕ 10.09.2020ರ ಗುರುವಾರ ರಾತ್ರಿ 7.45 ಕ್ಕೆ ನಿಧನರಾದರು. ನಾಲ್ವರು ಪುತ್ರರು, ಆರು ಜನ ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 11.09.2020ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮ ಎಲೆಬೇತೂರಿನ ಅವರ ತೋಟದಲ್ಲಿ ನೆರವೇರಲಿದೆ.

**ಕೆ.ಎಸ್. ಮಂಜುನಾಥ್ ಎಲಿಗಾರ್ ನಿಧನ**



ದಿ. ಎಲಿಗಾರ್ ಷಣ್ಮುಖಪ್ಪ ಅವರ ಪುತ್ರ ಹಾಗೂ ಬಾಪೂಜಿ ವಿದ್ಯಾಸಂಸ್ಥೆಯ ಎಂ.ಎಸ್.ಬಿ. ಕಾಲೇಜಿನ ಜ್ಯೂನಿಯರ್ ಕ್ಲರ್ಕ್ ಕೆ.ಎಸ್. ಮಂಜುನಾಥ್ ಎಲಿಗಾರ್ (58) ಅವರು ದಿನಾಂಕ 10.09.2020ರ ಗುರುವಾರ ಮಧ್ಯಾಹ್ನ 2.30ಕ್ಕೆ ನಿಧನರಾದರು. ಪತ್ನಿ, ಮೂವರು ಪುತ್ರಿಯರು, ಅಳಿಯಂದಿರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 11.09.2020ರ ಶುಕ್ರವಾರ ಬೆಳಿಗ್ಗೆ ನಡೆಯಲಿದೆ.

**ಹಳೇ ಕುಂದವಾಡದ ಭದ್ರಪ್ಪರ ಸಿದ್ದಮ್ಮ ನಿಧನ**



ದಾವಣಗೆರೆ ತಾಲ್ಲೂಕು ಹಳೇ ಕುಂದವಾಡ ಗ್ರಾಮದ ವಾಸಿ, ದಿ. ಭದ್ರಪ್ಪರ ರೇವಣಸಿದ್ದಪ್ಪನವರ ಪತ್ನಿ ಭದ್ರಪ್ಪ ಸಿದ್ದಮ್ಮ (86) ಅವರು ದಿನಾಂಕ: 10.09.2020 ರಂದು ಗುರುವಾರ ಮಧ್ಯಾಹ್ನ 2 ಗಂಟೆಗೆ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ: 11.09.2020 ರಂದು ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ದಾವಣಗೆರೆ ತಾಲ್ಲೂಕು ಹಳೇ ಕುಂದವಾಡ ಗ್ರಾಮದ ನೆರವೇರಲಿದೆ.

|| ಓಂ ಶ್ರೀ ವೀರಭದ್ರಸ್ವಾಮಿನೇ ನಮಃ||

**ಶಿವಗಣಾರಾಧನೆ ಆಹ್ವಾನ**


ಜನನ : 11.09.1958, ಮರಣ : 31.08.2020

ಕುರುವಹೊಸಳ್ಳಿಮಠದ ಶ್ರೀ ವೀರಭದ್ರಯ್ಯನವರು
ನಿವೃತ್ತ ವ್ಯವಸ್ಥಾಪಕರು, ದಾವಣಗೆರೆ ಅರ್ಬನ್ ಕೋ.ಆಪ್. ಬ್ಯಾಂಕ್
ಇವರು ಮಾಡುವ ವಿಜ್ಞಾಪನೆಗಳು.
ನನ್ನ ಧರ್ಮಪತ್ನಿಯಾದ
**ಶ್ರೀಮತಿ ಕೆ.ಎಂ. ಉಮಾದೇವಿಯವರು**
ಹೃದಯಾಘಾತದಿಂದ ದಿನಾಂಕ : 31.08.2020ನೇ ಸೋಮವಾರದಂದು ಮಧ್ಯಾಹ್ನ 12.00 ಗಂಟೆಗೆ ಶಿವೈಕ್ಯರಾಗಿರುತ್ತಾರೆ. ತತ್ಸಂಬಂಧವಾದ
'ಶಿವಗಣಾರಾಧನೆ'ಯನ್ನು
ದಿನಾಂಕ : 12.09.2020 ಶನಿವಾರದಂದು ದಾವಣಗೆರೆ ಜಿಲ್ಲಾ, # 2043/37, ಎಸ್.ಎಸ್. ಲೇಔಟ್, 'ಬಿ' ಬ್ಲಾಕ್, 3ನೇ 'ಎ' ಮೇನ್, ಸರ್ವಮಂಗಳ ಮನೆಯಲ್ಲಿ ಶ್ರೀ ಷ||ಬ್ರ|| ಡಾ|| ಕೊಟ್ಟೂರು ಬಸವೇಶ್ವರ ಶಿವಾಚಾರ್ಯ ಸ್ವಾಮಿಗಳು, ಜುಕ್ತಿ ಹಿರೇಮಠ ಸೂಡಿ, ಧಾರವಾಡ. ಇವರ ದಿವ್ಯಸಾನ್ನಿಧ್ಯ ಹಾಗೂ ದಿವ್ಯ ಪಾದಪೂಜೆಯೊಂದಿಗೆ ಏರ್ಪಡಿಸಲಾಗಿದೆ. ತಾವು ದಯವಿಟ್ಟು ಕುಟುಂಬ ಸಮೇತರಾಗಿ ದಯಮಾಡಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ. - ಭೋಜನ : ಮಧ್ಯಾಹ್ನ 12.30ಕ್ಕೆ
ಇಂತಿ ದುಃಖಿತಪ್ತ ಕುಟುಂಬ ವರ್ಗ :
ಪತಿ, ಮಕ್ಕಳು, ಸೊಸೆ ಹಾಗೂ ಬಂಧು-ಮಿತ್ರರು, ಫೋ. : 73492 06165

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 09.09.2020 ರಂದು ನಿಧನರಾದ ದಾವಣಗೆರೆ ಪ್ರವಾಸಿ ಮಂದಿರ ರಸ್ತೆಯ ಮಹಿಳಾ ಸಮಾಜ ಕಾಂಪ್ಲೆಕ್ಸ್‌ನ ಮೋತಿ ಸೈಕಲ್ ಮಾರ್ಟ್ ಮಾಲೀಕರಾದ ಶ್ರೀ ಟಿ. ಶಂಕರಪ್ಪ ಅವರ ಪುತ್ರರೂ, ನಮ್ಮ ಆತ್ಮೀಯರಾದ
**ಶ್ರೀ ಟಿ.ಎಸ್. ಬಕ್ಕೇಶ್**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
✦ ಅಂದನೂರು ಮುಪ್ಪಣ್ಣ, ನಿರ್ದೇಶಕರು, ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್
✦ ಡಾ. ಎ.ಕೆ. ರುದ್ರಮುನಿ, ಕೀಲು-ಮೂಳೆ ತಜ್ಞರು
✦ ಬೆಳ್ಳೂಡಿ ಮಂಜುನಾಥ್, ವಿಶೇಷ ಆಹ್ವಾನಿತರು ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್

**ಭಾವಪೂರ್ಣ ಶ್ರದ್ಧಾಂಜಲಿ**



ಜನನ : 05.07.1962
ಮರಣ : 10.09.2020
ದಿನಾಂಕ 10.09.2020ರ ಗುರುವಾರ ಮಧ್ಯಾಹ್ನ 3 ಗಂಟೆಗೆ ನಿಧನರಾದ
**ಶ್ರೀ ಮಂಜುನಾಥ ಕೆ.ಎಸ್.** ರವರ
(ದ್ವಿತೀಯ ದರ್ಜೆ ಸಹಾಯಕರು, ಎಂ.ಎಸ್.ಬಿ. ಕಾಲೇಜು)
ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಹಾಗೂ ಅವರ ಕುಟುಂಬ ವರ್ಗಕ್ಕೆ ದುಃಖ ಭರಿಸುವ ಶಕ್ತಿಯನ್ನು ಭಗವಂತನು ದಯಪಾಲಿಸಲೆಂದು ಪ್ರಾರ್ಥಿಸುತ್ತೇವೆ.
ದುಃಖತಪ್ತರು,
ಪ್ರಾಂಶುಪಾಲರು, ಕಾಲೇಜಿನ ಸಮಸ್ತ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿ ವೃಂದ
**ಎಂ.ಎಸ್.ಬಿ. ಕಲಾ ಮತ್ತು ವಾಣಿಜ್ಯ ಕಾಲೇಜು**
ದಾವಣಗೆರೆ.

# ವಾಲ್ಮೀಕಿ ಸಮಾಜಕ್ಕೆ ಮೀಸಲಾತಿ ನೀಡದಿದ್ದರೆ ವಿಧಾನಸೌಧ ಮುತ್ತಿಗೆ

ದಾವಣಗೆರೆ, ಸೆ.10- ಬರುವ ಅಧಿವೇಶನದಲ್ಲಿ ವಾಲ್ಮೀಕಿ ನಾಯಕ ಸಮಾಜಕ್ಕೆ ಶೇ. 7.5 ರಷ್ಟು ಮೀಸಲಾತಿ ನೀಡದಿದ್ದರೆ ವಿಧಾನಸೌಧಕ್ಕೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಗುವುದು ಎಂದು ವಾಲ್ಮೀಕಿ ನಾಯಕ ವಿದ್ಯಾರ್ಥಿ ನಿಲಯದ ಅಧ್ಯಕ್ಷ ಬಿ. ವೀರಣ್ಣ ತಿಳಿಸಿದ್ದಾರೆ.

ರಾಜ್ಯದಲ್ಲಿ ಸುಮಾರು 75 ಲಕ್ಷ ಜನಸಂಖ್ಯೆ ಹೊಂದಿರುವ ವಾಲ್ಮೀಕಿ ನಾಯಕ ಸಮಾಜಕ್ಕೆ ಶೇ 7.5 ರಷ್ಟು ಮೀಸಲಾತಿ ನೀಡಬೇಕು. ವಾಲ್ಮೀಕಿ ಸಮಾಜ ಬಾಂಧವರು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸೇರಿದಂತೆ ವಿವಿಧ ವಲಯಗಳಲ್ಲಿ ಹಿಂದುಳಿದಿದ್ದಾರೆ. ಕಳೆದ 4 ದಶಕಗಳಿಂದ ಶ್ರೀಗಳ ನೇತೃತ್ವದಲ್ಲಿ ಪಾದಯಾತ್ರೆ ಸೇರಿದಂತೆ ವಿವಿಧ ರೀತಿಯ ಹೋರಾಟಗಳನ್ನು ಶಾಂತಿಯುತವಾಗಿ ಮಾಡಿಕೊಂಡು ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದರೂ ಸಹ ವಾಲ್ಮೀಕಿ ನಾಯಕ ಸಮಾಜಕ್ಕೆ ಮೀಸಲಾತಿ ನೀಡಲು ಸರ್ಕಾರ ಮೀನಾಮೇಷ ಎಣಿಸುತ್ತಿರುವುದು ಖಂಡನೀಯ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇದೇ ದಿನಾಂಕ 21ರಂದು ನಡೆಯುವ ಅಧಿವೇಶನದಲ್ಲಿ ವಾಲ್ಮೀಕಿ ನಾಯಕ ಸಮಾಜಕ್ಕೆ ಶೇ 7.5ರಷ್ಟು ಮೀಸಲಾತಿ ನೀಡದಿದ್ದರೆ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಪುರಿ ಸ್ವಾಮಿಜಿ ಆದೇಶ ನೀಡಿದರೆ ರಾಜ್ಯದ 75 ಲಕ್ಷ ಜನರು ವಿಧಾನಸೌಧಕ್ಕೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಗುವುದು ಎಂದು ಹೇಳಿದರು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ವಾಲ್ಮೀಕಿ ನಾಯಕ ಸಮಾಜದ ಬೆಂಬಲದಿಂದ ಅಧಿಕಾರಕ್ಕೆ ಬಂದಿದ್ದಾರೆ. ಸಮಾಜಕ್ಕೆ 24 ಗಂಟೆಯೊಳಗೆ ಮೀಸಲಾತಿ ನೀಡುವುದಾಗಿ ಘೋಷಿಸಿದ್ದರು. ಆದರೆ ವರ್ಷ ಕಳೆದರೂ ನುಡಿದಂತೆ ನಡೆಯಲಿಲ್ಲ ಎಂದು ಕಿಡಿ ಕಾರಿದರು.

ಆರೋಗ್ಯ ಸಚಿವ ಶ್ರೀರಾಮುಲು ನೇತೃತ್ವದಲ್ಲಿ ಸರ್ವಪಕ್ಷಗಳ ಮುಖಂಡರೊಂದಿಗೆ ಮುಖ್ಯಮಂತ್ರಿಗಳ ಬಳಿ ನಿಯೋಗ ತೆರಳಿ ಮತ್ತೊಮ್ಮೆ ಮನವಿ ಸಲ್ಲಿಸಲಾಗುವುದು ಎಂದವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಹದಡಿ ಹಾಲಪ್ಪ, ಹೊದಿಗೆರೆ ರಮೇಶ್, ಓಬಳಪ್ಪ ಇದ್ದರು.

# ಮುಖ್ಯಮಂತ್ರಿಯೊಂದಿಗೆ ಡಿಸಿ ವಿಡಿಯೋ ಸಂವಾದ

## ಜಿಲ್ಲೆಯ ಕೋವಿಡ್ ಸ್ಥಿತಿಗತಿ ಮತ್ತು ಮಳೆ, ಬೆಳೆ ಹಾನಿ ಮಾಹಿತಿ ನೀಡಿದ ಜಿಲ್ಲಾಧಿಕಾರಿ

ದಾವಣಗೆರೆ, ಸೆ.10 - ಜಿಲ್ಲಾಡಳಿತ ಭವನದಲ್ಲಿ ಮುಖ್ಯಮಂತ್ರಿಗಳೊಂದಿಗೆ ಇಂದು ನಡೆದ ವಿಡಿಯೋ ಸಂವಾದದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಮಾತನಾಡಿ, ಜಿಲ್ಲೆಯ ಕೋವಿಡ್ ಪರಿಸ್ಥಿತಿ ಬೆಳೆ ಹಾನಿ ರಸಗೊಬ್ಬರ ಕುರಿತಾಗಿ ಮಾಹಿತಿ ನೀಡಿದರು.

> ಪೊಲೀಸ್ ಇಲಾಖೆಯವರು ಇಲ್ಲಿಯವರೆಗೆ ಮಾಸ್ಕ್ ಹಾಕದವರಿಂದ 25 ಲಕ್ಷ ರೂ. ದಂಡ ವಸೂಲಿ ಮಾಡಿದ್ದಾರೆ ಹಾಗೂ ಸಾರ್ವಜನಿಕರು ಕಡ್ಡಾಯ ಮಾಸ್ಕ್ ಧರಿಸಲು ಜಾಗೃತಿ ಮೂಡಿಸಲಾಗುತ್ತಿದೆ.

ಕೊರೊನಾ ಹೋರಾಟದಲ್ಲಿ ನಿರಂತರವಾಗಿ ಭಾಗಿಯಾಗಿದ್ದೇವೆ. ಮುಖ್ಯಮಂತ್ರಿಯವರು ಕೇಳಿದ ಜಿಲ್ಲೆಯ ಸಾವಿನ ಪ್ರಮಾಣ ಕುರಿತ ಪ್ರಶ್ನೆಗೆ, ಜಿಲ್ಲೆಯಲ್ಲಿ ಸಾವಿನ ಪ್ರಮಾಣ ಕಡಿಮೆ ಮಾಡಲು ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಾಗುತ್ತಿದೆ. ಹಿಂದಿನ ತಿಂಗಳಿಗಿಂತ ಸಾವಿನ ಪ್ರಮಾಣ ಕಡಿಮೆಯಾಗಿದೆ. ಈ ಹಿನ್ನೆಲೆಯಲ್ಲಿ ರೋಗ ಲಕ್ಷಣ ಕಂಡುಬರುವ ವ್ಯಕ್ತಿಗಳನ್ನು ತಕ್ಷಣ ಪರೀಕ್ಷೆಗೆ ಒಳಪಡಿಸಿ ತ್ವರಿತವಾಗಿ ಚಿಕಿತ್ಸೆ ನೀಡಲಾಗುತ್ತಿದೆ.

ಹೆಚ್ಚು ಹೆಚ್ಚು ಪರೀಕ್ಷೆ ಮಾಡುವುದು, ಈ ಪರೀಕ್ಷೆಗಳಿಂದ ಗುರುತಿಸಲಾದ ಪ್ರಾಥಮಿಕ ಸಂಪರ್ಕ ದುರ್ಬಲ ವರ್ಗ, ಬಿಪಿ, ಶುಗರ್ ಹಾಗೂ ಡೆತ್ ಪ್ಯಾಕೆಟ್ ಜಾಸ್ತಿ ಇರುವ ಕಡೆ ಹೆಚ್ಚು ಪರೀಕ್ಷೆಗೆ ಒಳಪಡಿಸಿ, ಅವರಿಗೆ ಸರಿಯಾದ ಚಿಕಿತ್ಸೆ ನೀಡುವ ಮೂಲಕ ಸಾವಿನ ಪ್ರಮಾಣ ಕಡಿಮೆ ಮಾಡಲು ಶ್ರಮಿಸಲಾಗುತ್ತಿದೆ ಎಂದರು ಹಾಗೂ ಎಲ್ಲಾ ಕಡೆ ಆಕ್ಸಿಜನ್ ವ್ಯವಸ್ಥೆ ಸರಿಯಾಗಿ ಮಾಡಲಾಗಿದ್ದು, ಸಾಕಷ್ಟು ವೆಂಟಿಲೇಟರ್‌ಗಳು ಇವೆ. ಈ ಪೈಕಿ 31 ವೆಂಟಿಲೇಟ್‌ರ್‌ಗಳು ಕಾರ್ಯ ನಿರ್ವಹಿಸುತ್ತಿದ್ದು, ಇನ್ನುಳಿದ 39 ವೆಂಟಿಲೇಟರ್‌ಗಳಿಗೆ ತಜ್ಞ ವೈದ್ಯರು ಹಾಗೂ ಸಿಬ್ಬಂದಿಗಳನ್ನು ನೀಡಲು ಕೋರಿದರು.

ಇದರೊಂದಿಗೆ ಪ್ರತಿನಿತ್ಯ 2500 ಟೆಸ್ಟ್‌ಗಳನ್ನು ಮಾಡಲು ಗುರಿ ಇಟ್ಟುಕೊಂಡಿದ್ದು, 31 ಮೊಬೈಲ್ ಟೀಮ್‌ಗಳ ಮೂಲಕ ಟೆಸ್ಟ್ ಮಾಡಿಸಲಾಗುತ್ತಿದೆ ಎಂದು ತಿಳಿಸಿದರು.

ರಾಜ್ಯ ಸರ್ಕಾರದ ಬೆಳೆ ವಿಮೆ, ಕ್ಷೌರಿಕ, ಮಡಿವಾಳರು, ಆಟೋ, ಟ್ಯಾಕ್ಸಿ ಚಾಲಕರು ಇವರಿಗೆ ಪರಿಹಾರದ ಮೊತ್ತ ಸಂದಾಯವಾಗಿದೆ. ಇದರಲ್ಲಿ ಯಾವುದೇ ಲೋಪದೋಷವಾಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಮಳೆಯಿಂದಾಗಿರುವ ಬೆಳೆ ಹಾನಿ ಪ್ರಮಾಣ ಕುರಿತಂತೆ ಮಾಹಿತಿ ನೀಡಿ ಎಸ್‌ಡಿಆರ್‌ಎಫ್ ಹಾಗೂ ಎನ್‌ಡಿಆರ್‌ಎಫ್ ಮಾನದಂಡಗಳಂತೆ 5 ಲಕ್ಷ ಹಾಗೂ 3 ಲಕ್ಷ ಮತ್ತು 1 ಲಕ್ಷಗಳಂತೆ ಸರ್ಕಾರದ ಆದೇಶದಂತೆ ವಿತರಿಸಲು ಕ್ರಮ ಕೈಗೊಳ್ಳಲಾಗಿದೆ. ಇತ್ತೀಚಿಗೆ ಸುರಿದ ಭಾರೀ ಮಳೆಯಿಂದ ಸುಮಾರು 6.87 ಕೋಟಿ ರೂ. ಹಾನಿಯಾಗಿದ್ದು ರಸ್ತೆ, ಸೇತುವೆ, ಪಾಠಶಾಲೆ, ಟ್ರಾನ್ಸ್‌ಫಾರ್ಮರ್ ವಿದ್ಯುತ್ ಕಂಬಗಳು ಹಾಳಾಗಿದ್ದು, 31 ಸಪ್ಲೇ ಲೈನ್‌ಗಳು ಹಾಳಾಗಿವೆ. ಅದರೊಂದಿಗೆ 145 ಹೆಕ್ಟೇರ್ ಬೆಳೆ ಹಾನಿಯಾಗಿದೆ. ಮೊನ್ನೆ ಮಂಗಳವಾರ ಸುರಿದ 51 ಮಿ.ಲೀ. ಮೀಟರ್ ಮಳೆಯಿಂದ ಸಾಕಷ್ಟು ಹಾನಿಯಾಗಿದೆ. ಮಾಯಕೊಂಡ ಭಾಗದಲ್ಲಿ ಹೆಚ್ಚಿನ ಮಳೆಯಾಗಿದ್ದು, ಈ ಎಲ್ಲಾ ವರದಿಯನ್ನು ಶುಕ್ರವಾರದ ಸಂಜೆಯೊಳಗೆ ಒಟ್ಟಾರೆ ಹಾನಿಯ ಪ್ರಮಾಣದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ವಿವರಿಸಿದ್ದಾರೆ.

ವಿಡಿಯೋ ಸಂವಾದದ ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ಸಿಇಓ ಪದ್ಮಾ ಬಸವಂತಪ್ಪ, ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ನೋಡಲ್ ಅಧಿಕಾರಿ ಪ್ರಮೋದ್ ನಾಯ್ಕ್, ಡಿಹೆಚ್‌ಓ ರಾಘವೇಂದ್ರ ಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

# ಸಂತೆ, ಗ್ಲಾಸ್ ಹೌಸ್ ಪ್ರವಾಸಿ ತಾಣ

**(1ನೇ ಪುಟದಿಂದ)** ಹೇಳಿದರು.

**ಶೀತಲೀಕರಣ ಘಟಕ :** ರೈತರ ಹಣ್ಣು ಇತ್ಯಾದಿ ಉತ್ಪನ್ನಗಳನ್ನು ಶೇಖರಿಸಲು ಜಿಲ್ಲೆಯಲ್ಲಿ ಯಾವುದೇ ಶೀತಲೀಕರಣ ಘಟಕ ಇಲ್ಲದೇ ಇರುವ ಬಗ್ಗೆ ಬೇಸರ ವ್ಯಕ್ತಪಡಿಸಿದ ಸಚಿವರು, ಶೀಘ್ರದಲ್ಲೇ ಪ್ರಸ್ತಾವನೆಗಳಿಗೆ ಮಂಜೂ ರಾತಿ ಪಡೆದು, ಖಾಸಗಿ ಸಹಭಾಗಿತ್ವದಲ್ಲಿ ಕ್ರಮ ತೆಗೆದುಕೊಳ್ಳಬೇಕು. ಪ್ರತಿ ತಾಲ್ಲೂಕುಗಳಲ್ಲೂ ಈ ಘಟಕಗಳಾಗಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ತೋಟಗಾರಿಕೆ ಇಲಾಖೆ ಉಪ ನಿರ್ದೇಶಕ ಲಕ್ಷ್ಮೀಕಾಂತ ಬೊಮ್ಮನ್ನರ್, ಕೋವಿಡ್ ಹಾಗೂ ಮಳೆಯಿಂದಾಗಿ ಹಾನಿಗೀಡಾಗಿರುವ ಹೂ, ಹಣ್ಣು ಹಾಗೂ ತರಕಾರಿ ಬೆಳೆಯುವ ರೈತರಿಗೆ ಪರಿಹಾರ ಕಲ್ಪಿಸಲಾಗುತ್ತಿದೆ. ತರಕಾರಿ ಬೆಳೆಗಾರರಿಗೆ 2.76 ಕೋಟಿ ರೂ. ಹೆಚ್ಚಿನ ಪರಿಹಾರ ನೀಡಲು ಪ್ರಸ್ತಾವನೆ ಕಳಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಹರಿಹರ ಶಾಸಕ ರಾಮಪ್ಪ, ಅಪರ ಜಿಲ್ಲಾಧಿಕಾರಿ ಪೂಜಾರ್ ವೀರಮಲ್ಲಪ್ಪ, ನಗರಾಭಿ ವೃದ್ಧಿ ಕೋಶದ ಯೋಜನಾ ನಿರ್ದೇಶಕಿ ನಜ್ಮ, ಜಿ.ಪಂ. ಉಪ ಕಾರ್ಯದರ್ಶಿ ಆನಂದ್, ರೇಷ್ಮೆ ಇಲಾಖೆ ಉಪ ನಿರ್ದೇಶಕಿ ನಿರ್ಮಲ, ರೇಷ್ಮೆ ಇಲಾಖೆ ಸಹಾಯಕ ನಿರ್ದೇಶಕ ಶ್ರೀಹರ್ಷ ಮತ್ತಿತರರು ಉಪಸ್ಥಿತರಿದ್ದರು.

## ನುಗ್ಗೆಗಾಗಿ ನೂಕು ನುಗ್ಗಲು!

ನುಗ್ಗೆ ಕಾಯಿಗೆ ಇತ್ತೀಚಿನ ದಿನಗಳಲ್ಲಿ ಭಾರೀ ಬೇಡಿಕೆ ಬಂದಿದೆ. ಜಗಳೂರು ತಾಲ್ಲೂಕಿನಲ್ಲಿ ಪ್ರತಿ ಎಕರೆಗೆ ರೈತರು 2.5 ಲಕ್ಷ ರೂ.ಗಳವರೆಗೆ ಆದಾಯ ಪಡೆಯುತ್ತಿದ್ದಾರೆ ಎಂದು ಜಿಲ್ಲಾ ಪಂಚಾಯ್ತಿ ಉಪ ಕಾರ್ಯದರ್ಶಿ ಆನಂದ್ ಸಭೆಗೆ ತಿಳಿಸಿದರು.

ನುಗ್ಗೆಕಾಯಿಗೆ ಮಹಾರಾಷ್ಟ್ರದಿಂದ ಸಾಕಷ್ಟು ಬೇಡಿಕೆ ಇದೆ. ಇದರ ಸೊಪ್ಪನ್ನು ಒಣಗಿಸಿ ಚಿತ್ರದುರ್ಗದಲ್ಲಿ ಕೆಜಿಗೆ 100 ರೂ.ಗಳವರೆಗೂ ಮಾರಲಾಗುತ್ತಿದೆ ಎಂದವರು ಹೇಳಿದರು. ದಾವಣಗೆರೆ ಹಾಗೂ ಜಗಳೂರು ತಾಲ್ಲೂಕುಗಳಲ್ಲಿ ಡ್ರ್ಯಾಗನ್ ಫ್ರೂಟ್ ಬೆಳೆಯುವ ಪ್ರವೃತ್ತಿಯೂ ಹೆಚ್ಚಾಗುತ್ತಿದೆ ಎಂದವರು ಹೇಳಿದರು.

## ವಸತಿಗೆ 2 ಎಕರೆ ಜಮೀನು

**(1ನೇ ಪುಟದಿಂದ)** ಮನವಿಗೆ ಸಚಿವ ನಾರಾಯಣ ಗೌಡ ಸ್ಪಂದಿಸಿ, ಅನು ಮೋದನೆಗೆ ಭರವಸೆ ನೀಡಿದ್ದಾರೆ.

ಈ ಕುರಿತ ಪ್ರಸ್ತಾವನೆಯನ್ನು ತಮಗೆ ಕಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿರುವ ಸಚಿವ ಗೌಡ, ತೋಟಗಾರಿಕೆ ಇಲಾಖೆಯ ಜಮೀನಿಗೆ ಬದಲು ಬೇರೆ ಕಂದಾಯ ಜಮೀನು ವಿನಿಮಯ ಮಾಡಿಕೊಳ್ಳುವುದಾಗಿ ಹೇಳಿದರು.

## ರೇಷ್ಮೆ ಜಮೀನು ಉಳಿಸಿಕೊಳ್ಳಿ

**(1ನೇ ಪುಟದಿಂದ)** ಜಮೀನು ಹೊಂದಿದೆ. ಇದನ್ನು ಯಾವುದೇ ಕಾರಣಕ್ಕೂ ಕಬಳಿಸಲು ಬಿಡಬಾರದು. ಜಿಲ್ಲಾಧಿಕಾರಿಗಳ ಸಹಕಾರದಲ್ಲಿ ಜಮೀನು ಅಳತೆ ಮಾಡಿಸಿಕೊಂಡು ಸಂರಕ್ಷಣೆ ಮಾಡಿಕೊಳ್ಳಬೇಕೆಂದು ಸಚಿವರು ರೇಷ್ಮೆ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

## ಎಲೆ ಬಳ್ಳಿ ತೋಟಕ್ಕೆ ಪರಿಹಾರ

**(1ನೇ ಪುಟದಿಂದ)** ಸೂಚಿಸಿದ್ದಾರೆ.

ನೂರಾರು ಎಕರೆ ತೋಟ ಮುಳುಗಡೆಯಾಗಿದ್ದು, ಮತ್ತೆ ಬೆಳೆಯಲು ಬಾರದ ಪರಿಸ್ಥಿತಿ ಉಂಟಾಗಿದೆ. ಈ ಬಗ್ಗೆ ತಾವು ಪರಿಶೀಲಿಸಿರುವುದಾಗಿ ಸಚಿವ ರಾಮಪ್ಪ ಸಭೆಯಲ್ಲಿ ತಿಳಿಸಿದರು.

# ಹರಿಹರ ನಗರ ಅಭಿವೃದ್ಧಿಗೆ ಆಗ್ರಹ



## ಜಯಕರ್ನಾಟಕ ಸಂಘಟನೆ ಧರಣಿ

ಹರಿಹರ, ಸೆ.10- ನಗರ ವ್ಯಾಪ್ತಿಗೆ ಬರುವ ಪ್ರಮುಖ ಮುಖ್ಯ ರಸ್ತೆಗಳು, ವಿದ್ಯುತ್ ದೀಪ ಅಭಿವೃದ್ಧಿ/ದುರಸ್ತಿ ಕೆಲಸಗಳನ್ನು ಸರಿಪಡಿಸುವಂತೆ ಆಗ್ರಹಿಸಿ ಅನಿರ್ದಿಷ್ಟ ಕಾಲದವರೆಗೆ ಧರಣಿ ಮೂಲಕ ಪ್ರತಿಭಟನೆಯನ್ನು ಜಯ ಕರ್ನಾಟಕ ಸಂಘಟನೆ ಹಮ್ಮಿಕೊಂಡಿತ್ತು.

ಹರಿಹರ ನಗರ ವ್ಯಾಪ್ತಿಗೆ ಬರುವ ಮುಖ್ಯ ರಸ್ತೆಯಾದ ಕೆಇಬಿ ಯಿಂದ ಹೊಸ ತುಂಗಭದ್ರಾ ಸೇತುವೆಯವರೆಗೆ ಸುಗಮವಾಗಿ ವಾಹನಗಳು ಸಂಚಾರ ಮಾಡಲು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಹಿನ್ನೆಲೆಯಲ್ಲಿ ಸದರಿ ರಸ್ತೆ ಕಾಮಗಾರಿ ಹಲವಾರು ವರ್ಷಗಳಿಂದ ಅಭಿವೃದ್ಧಿ ಪಡಿಸದೆ ಹಾಗೆ ಬಾಕಿ ಉಳಿದುಕೊಂಡಿದೆ. ತುಂಗಭದ್ರಾ ಸೇತುವೆ ಮುಂಭಾಗದಲ್ಲಿ ರಸ್ತೆ ಮತ್ತು ವಿದ್ಯುತ್ ದೀಪ ಸರಿಪಡಿಸಿ ಕೊಡುವವರೆಗೂ ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಳ್ಳಲಾಗಿದೆ.

ತಾಲ್ಲೂಕು ಘಟಕದ ಅಧ್ಯಕ್ಷ ಗೋವಿಂದ್, ಉಪಾಧ್ಯಕ್ಷ ಶೇಖರಪ್ಪ, ಪ್ರಧಾನ ಕಾರ್ಯದರ್ಶಿ ಸುನೀಲ್, ಸಂಘಟನಾ ಕಾರ್ಯದರ್ಶಿ ಭರತ್, ಗ್ರಾಮ ಘಟಕದ ಅಧ್ಯಕ್ಷ, ಮಣಿಕುಮಾರ್, ಉಪಾಧ್ಯಕ್ಷರಾದ ಸಂಜೀವ್, ಸಾಗರ್, ಕುಣೆಬೆಳಕೆರೆ ಅಧ್ಯಕ್ಷ ಚಂದ್ರಪ್ಪ, ಗುತ್ತೂರು ಕಾಲೋನಿ ಅಧ್ಯಕ್ಷ ಇರ್ಫಾನ್ ಬೇಗ್ ಹಾಗೂ ಶಂಕ್ರಪ್ಪ, ವಾಗೀಶ್, ಶಬರೀಶ್ ಇನ್ನಿತರರು ಹಾಜರಿದ್ದರು.

# ನಗರದಲ್ಲಿ ಇಂದು ಕನ್ನಡ ಶಿಕ್ಷಕರಿಗೆ ಕಾರ್ಯಾಗಾರ

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಆಶ್ರಯದಲ್ಲಿ 'ಕನ್ನಡ ಭಾಷಾ ಬೋಧನೆ' ವಿಷಯ ಕುರಿತು ಕಾರ್ಯಾಗಾರವು ಕುವೆಂಪು ಕನ್ನಡ ಭವನದಲ್ಲಿ ಇಂದು ನಡೆಯಲಿದೆ.

ಬೆಳಿಗ್ಗೆ 10.30 ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಅಧ್ಯಕ್ಷತೆಯನ್ನು ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ ವಹಿಸುವರು. ಕಾರ್ಯಕ್ರಮವನ್ನು ಸಿ.ಆರ್. ಪರಮೇಶ್ವರಪ್ಪ ನೆರವೇರಿಸುವರು. ಮುಖ್ಯ ಅತಿಥಿಯಾಗಿ ಹೆಚ್.ಕೆ. ಲಿಂಗರಾಜ್, ಅತಿಥಿಗಳಾಗಿ ಬಿ.ಸಿ. ಸಿದ್ದಪ್ಪ, ಎ.ಆರ್. ಉಜ್ಜನಪ್ಪ ಆಗಮಿಸುವರು.

ಬೆಳಿಗ್ಗೆ 11.30 ಕ್ಕೆ ಗೋಷ್ಠಿ-1 ಕ್ಕೆ ನಡೆಯುವುದು. ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಎಂ.ಜಿ. ಈಶ್ವರಪ್ಪ ಭಾಗವಹಿಸಿ 'ಕನ್ನಡ ವರ್ಣಮಾಲೆ-ಒಂದು ವೈಜ್ಞಾನಿಕ ವಿಶ್ಲೇಷಣೆ' ವಿಷಯ ಕುರಿತು ತಿಳಿಸಿಕೊಡುವರು.

ಮಧ್ಯಾಹ್ನ 12.30 ಕ್ಕೆ ನಡೆಯುವ ಗೋಷ್ಠಿ-2 ರಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಡಾ. ದಾದಾಪೀರ್ ನವಿಲೇಹಾಳ್ ಭಾಗವಹಿಸಿ, 'ಗದ್ಯ-ಪದ್ಯ ಬೋಧನೆ' ಕುರಿತು ಮಾತನಾಡುವರು. ಮಧ್ಯಾಹ್ನ 2 ಗಂಟೆಗೆ ನಡೆಯುವ ಗೋಷ್ಠಿ-3 ರಲ್ಲಿ ಹೆಚ್.ಎಂ. ಬಸವರಾಜಪ್ಪ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ 'ಮಾತೃಭಾಷಾ ಬೋಧನೆ ಮತ್ತು ಪದ ಪ್ರಯೋಗ' ವಿಷಯವಾಗಿ ತಿಳಿಸಿಕೊಡುವರು.

# ಜಿಎಂಐಟಿ ಉದ್ಯೋಗಾಧಿಕಾರಿಗೆ ಪ್ರಶಸ್ತಿ



ದಾವಣಗೆರೆ, ಸೆ.10- ನಗರದ ಜಿ.ಎಂ. ತಾಂತ್ರಿಕ ಮಹಾವಿದ್ಯಾಲಯದ ಉದ್ಯೋಗಾಧಿಕಾರಿ ಮತ್ತು ಆಡಳಿತ ಮಂಡಳಿಯ ಸದಸ್ಯ ತೇಜಸ್ವಿ ಕಟ್ಟಿಮನಿ ಅವರಿಗೆ ಶಿಕ್ಷಕರ ದಿನಾಚರಣೆಯಂದು ರಾಷ್ಟ್ರಮಟ್ಟದ ಎರಡು ಪ್ರಶಸ್ತಿಗಳು ಲಭಿಸಿವೆ.

ಮದ್ರಾಸ್ ಜರ್ನಲ್ ಸೀರಿಸ್ ಪ್ರೈವೇಟ್ ಲಿಮಿಟೆಡ್, ಚೆನ್ನೈ ನೀಡುವ' ಇನ್‌ಸ್ಪೈರಿಂಗ್ ಪ್ರೊಫೆಸರ್ ಆವಾರ್ಡ್' ಮತ್ತು ಇಂಟರ್ ನ್ಯಾಷನಲ್ ಇನ್ಸಿಟ್ಯೂಟ್ ಆಫ್ ಆರ್ಗನೈಸ್ಡ್ ರೀಸರ್ಚ್ ಇಂಡಿಯಾ ಕೊಡ ಮಾಡುವ 'ನ್ಯಾಷನಲ್ ಎಮಿನೆಂಟ್ ಎಜುಕೇಟರ್ ಆವಾರ್ಡ್' ಲಭಿಸಿವೆ.

# ನಗರದಲ್ಲಿ ರೇಷ್ಮೆ ಮಳಿಗೆಗೆ ಮತ್ತೆ ಚಾಲನೆ : ರೇಷ್ಮೆ ಸಚಿವ ನಾರಾಯಣ ಗೌಡ

ದಾವಣಗೆರೆ, ಸೆ. 10 – ನಗರದಲ್ಲಿ ಬಂದ್ ಆಗಿರುವ ಕೆ.ಎಸ್.ಐ.ಸಿ. ರೇಷ್ಮೆ ಸೀರೆ ಮಳಿಗೆಯನ್ನು ಮತ್ತೆ ತೆರೆಯುವುದಾಗಿ ತೋಟಗಾರಿಕೆ, ರೇಷ್ಮೆ ಮತ್ತು ಪೌರಾಡಳಿತ ಸಚಿವ ನಾರಾಯಣ ಗೌಡ ತಿಳಿಸಿದ್ದಾರೆ.

ಇಂದು ನಗರಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ತಮ್ಮನ್ನು ಭೇಟಿಯಾದ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದ ಅವರು, ಮಳಿಗೆಯನ್ನು ಮುಚ್ಚುವುದರ ಹಿಂದೆ ಯಾವುದೇ ರಾಜಕೀಯ ಇಲ್ಲ. ಆದರೆ, ಅತಿಯಾದ ಕಮೀಷನ್ ಹಾಗೂ ಮಳಿಗೆ ಬಾಡಿಗೆ ಅತಿ ಹೆಚ್ಚಾಗಿರುವ ಕಾರಣ ಕೆಲ ಮಳಿಗೆಗಳನ್ನು ಮುಚ್ಚಲಾಗಿದೆ ಎಂದು ಹೇಳಿದ್ದಾರೆ.

ಕೆಲವೆಡೆ ಒಂದಕ್ಕೆ ಐದು ಪಟ್ಟು ಬಾಡಿಗೆ ನಿಗದಿ ಪಡಿಸಲಾಗಿದೆ. ಶೇ.5ರವರೆಗೆ ಸೀರೆ ಮಾರಾಟದ ಕಮೀಷನ್ ನೀಡಲಾಗಿದೆ. ಕೆಲ ಅಂಗಡಿಗಳಿಗೆ ಒಂದೇ ತಿಂಗಳಿಗೆ 2.5 ಕೋಟಿ ರೂ. ವರೆಗೆ ಕಮೀಷನ್ ನೀಡಲಾಗಿದೆ ಎಂದವರು ಹೇಳಿದ್ದಾರೆ.

ಇದನ್ನೆಲ್ಲ ಬದಲಿಸಿ ಪಿ.ಡಬ್ಲ್ಯೂ.ಡಿ. ಮೂಲಕ ವರದಿ ಪಡೆದು ಸೂಕ್ತ ಬಾಡಿಗೆ ನಿಗದಿಪಡಿಸಲಾಗುವುದು. ಮಾರಾಟ ಮಳಿಗೆಗಳಿಗೆ ವೇತನ ಹಾಗೂ ಉತ್ತೇಜನಗಳನ್ನು ನೀಡಲಾಗುವುದು ಎಂದವರು ತಿಳಿಸಿದ್ದಾರೆ.

ದಾವಣಗೆರೆ ಮುಂತಾದ ಕಡೆಗಳ ಮಳಿಗೆಗಳನ್ನು ಮುಚ್ಚಿ ಬೇರೆ ಎಲ್ಲೋ ಮಳಿಗೆ ತೆಗೆಯಬೇಕು ಎಂಬ ಉದ್ದೇಶ ಸರ್ಕಾರದ್ದಲ್ಲ. ಇದಕ್ಕಾಗಿ ಯಾವುದೇ ರಾಜಕೀಯವೂ ಬೇಡ ಎಂದು ಗೌಡ ಹೇಳಿದ್ದಾರೆ.

ನಗರದಲ್ಲಿ ಕೆ.ಎಸ್.ಐ.ಸಿ. ಮಳಿಗೆಯನ್ನು ಆಗ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಉದ್ಘಾಟಿಸಿದ್ದರು. ಅದನ್ನು ಬಿಜೆಪಿ ಸರ್ಕಾರ ಬಂದ ನಂತರ ಮುಚ್ಚಿದ್ದನ್ನು ಜಿಲ್ಲಾ ಕಾಂಗ್ರೆಸ್ ತೀವ್ರವಾಗಿ ಆಕ್ಷೇಪಿಸಿತ್ತು.

**ಮುಂಬೈನಲ್ಲಿ ಮಳಿಗೆಗಳು :** ಮೈಸೂರು ರೇಷ್ಮೆ ಸೀರೆಗೆ ವಿಶ್ವದಾದ್ಯಂತ ಬೇಡಿಕೆ ಇದೆ. ಮೂರು ಲಕ್ಷ ರೂ.ಗಳವರೆಗೆ ಸೀರೆಗಳು ಸಿಗುವುದು ಮೈಸೂರು ಸಿಲ್ಕ್‌ನಲ್ಲಿ ಮಾತ್ರ. ಬಂಗಾರ – ಬೆಳ್ಳಿ ಹಾಕಿ ನೇಯ್ಗೆ ಮಾಡುವ ಈ ಸೀರೆಗಳ ಮಾರಾಟಕ್ಕೆ ಮುಂಬೈನಲ್ಲಿ ನಾಲ್ಕು ಮಳಿಗೆಗಳನ್ನು ತೆರೆಯಲು ಉದ್ದೇಶಿಸಲಾಗಿದೆ ಎಂದು ಸಚಿವ ನಾರಾಯಣ ಗೌಡ ತಿಳಿಸಿದ್ದಾರೆ.

# ನಗರಕ್ಕೆ ಇಂದು ಭೈರತಿ ಬಸವರಾಜ್

ನಗರಾಭಿವೃದ್ಧಿ ಖಾತೆ ಸಚಿವರೂ ಆಗಿರುವ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ ಬಸವರಾಜ್ ಅವರು ಇಂದು ಸಂಜೆ 6.30ಕ್ಕೆ ನಗರಕ್ಕೆ ಆಗಮಿಸಿ ಪ್ರವಾಸಿ ಮಂದಿರದಲ್ಲಿ ವಾಸ್ತವ್ಯ ಮಾಡುವರು. ನಾಳೆ ಶನಿವಾರ ಬೆಳಿಗ್ಗೆ 9 ಗಂಟೆಗೆ ಹೊನ್ನಾಳಿ ತೆರಳುವರು. ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಹೊನ್ನಾಳಿಯ ಶಾಸಕರೊಂದಿಗೆ ಸ್ಥಳೀಯ ಕಾರ್ಯಕ್ರಮದಲ್ಲಿ ಭಾಗವಹಿಸುವರು. ನಂತರ ಮಧ್ಯಾಹ್ನ 2.30 ಕ್ಕೆ ಹೊನ್ನಾಳಿಯಿಂದ ಹೊರಟು, ಕೇಂದ್ರ ಸ್ಥಾನ ತಲುಪುವರು.

# ಮುಕ್ತ ವಿಶ್ವವಿದ್ಯಾಲಯ ಕೋರ್ಸ್‌ಗಳಿಗೆ ಪ್ರವೇಶ ಪ್ರಾರಂಭ

ದಾವಣಗೆರೆ, ಸೆ.10- ನಗರದ ಡಿ. ದೇವರಾಜ ಅರಸು ಪ್ರಥಮ ದರ್ಜೆ ಕಾಲೇಜಿನಡಿಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ವಿವಿಧ ಕೋರ್ಸ್‌ಗಳಿಗೆ ಪ್ರವೇಶಾತಿ ಮಾಡಿಕೊಳ್ಳಲು ಅನುಮೋದನೆ ಪಡೆದಿದೆ. ಈ ಕಾಲೇಜಿನ ಕಲಿಕಾ ಕೇಂದ್ರದಲ್ಲಿ ಬಿ.ಎ., ಬಿ.ಕಾಂ., ಬಿ.ಬಿ.ಎ., ಎಂ.ಎ., ಎಂ.ಕಾಂ., ಎಂ.ಎಸ್ಸಿ., ಎಂ.ಬಿ.ಎ., ಬಿ.ಎಲ್.ಐ.ಎಸ್., ಎಂ.ಎಲ್. ಐ.ಎಸ್., ಪಿಜಿ ಡಿಪ್ಲೋಮಾ ಹಾಗೂ ಮುಂತಾದ ಕೋರ್ಸುಗಳಿಗಾಗಿ ಪ್ರವೇಶಾತಿ ಪ್ರಾರಂಭವಾಗಿದೆ. ವಿವರಕ್ಕೆ ಸಂಪರ್ಕಿಸುವ ಫೋನ್ ಸಂಖ್ಯೆ : 081922 30090, ಮೊಬೈಲ್ : 80957 00999, 97428 35642.

# ಎನ್‌ಪಿಎ ಘೋಷಣೆ ಅವಧಿ ವಿಸ್ತರಣೆ

**(1ನೇ ಪುಟದಿಂದ)** ಸೆಪ್ಟೆಂಬರ್ 28ಕ್ಕೆ ನಿಗದಿ ಪಡಿಸಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರ ಹಾಗೂ ಆರ್‌ಬಿಐಗಳಿಗೆ ಒಂದು ಅವಕಾಶ ನೀಡಲಾಗಿದೆ. ನಂತರದಲ್ಲಿ ವಿಚಾರಣೆ ಮುಂದೂಡುವುದಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ. ಕೊರೊನಾ ಹಿನ್ನೆಲೆಯಲ್ಲಿ ಮುಂದೂಡಲಾದ ಕಂತುಗಳ ಮೇಲಿನ ಬಡ್ಡಿಯನ್ನು ವಸೂಲಿ ಮಾಡಬಾರದು ಎಂದು ಸುಪ್ರೀಂ ಕೋರ್ಟ್ ಎದುರು ಹಲವಾರು ಅರ್ಜಿಗಳನ್ನು ದಾಖಲಿಸಲಾಗಿದೆ.

## ಮಾಯಕೊಂಡ : ಇಂದು ಸಂಸದರ ಪ್ರವಾಸ

ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ಇಂದು ಬೆಳಿಗ್ಗೆ 11.30 ರಿಂದ ಮಧ್ಯಾಹ್ನ 1.30 ರವರೆಗೆ ಮಾಯಕೊಂಡ ವಿಧಾನಸಭಾ ಕ್ಷೇತ್ರದ ಸುಲ್ತಾನಿಪುರ, ಹಿಂಡಸಕಟ್ಟೆ, ಹೆಚ್.ಬಸವಾಪುರ, ಕ್ಯಾತನಹಳ್ಳಿ ಗ್ರಾಮಗಳಲ್ಲಿ ವಿವಿಧ ರಸ್ತೆ ಅಭಿವೃದ್ಧಿ ಕಾಮಗಾರಿಗಳ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಂ.ಬಿ. ಕೇರಿ, ಹೊಂಡದ ಸರ್ಕಲ್ ಸುತ್ತಮುತ್ತ, ಕಾಯಿಪೇಟೆ, ಜಾಲಿನಗರ, ಟೀಚರ್ ಕಾಲೋನಿ, ಶಿವಾಜಿ ನಗರ, ಶಿವಾಜಿ ಸರ್ಕಲ್, ಚಲುವಾದಿ ಕೇರಿ, ಇಡಬ್ಲ್ಯೂಎಸ್ ಕಾಲೋನಿ, ಹಳೇಪೇಟೆ, ಬಾರ್ ಲೈನ್ ರಸ್ತೆ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

## ಚನ್ನಗಿರಿ : ಇಂದು ನೂತನ ಶ್ರೀಗಳಿಗೆ ದೀಕ್ಷೆ

ಚಿತ್ರದುರ್ಗ ಶ್ರೀ ಮುರುಘ ರಾಜೇಂದ್ರ ಬೃಹನ್ಮಠದ ಆಡಳಿತ ಕ್ಕೊಳಪಟ್ಟ ಶಾಖಾ ಮಠದಲ್ಲಿ ಇಂದು ನೂತನ ಶ್ರೀಗಳ ಸಮಾಜಸೇವಾ ದೀಕ್ಷಾ (ಚರಪಟ್ಟ) ಮಹೋತ್ಸವ ಮತ್ತು ತಪೋಧನರಾದ ಲಿಂ. ಪೂಜ್ಯ ಶ್ರೀ ಜಯದೇವ ಮಹಾಸ್ವಾಮಿಗಳ ಪ್ರಥಮ ಸ್ಮರಣೋತ್ಸವ ಇಂದು ಚನ್ನಗಿರಿಯ ಶ್ರೀ ಹಾಲಸ್ವಾಮಿ ವಿರಕ್ತ ಮಠದಲ್ಲಿ ನಡೆಯುವುದು.

## ಗ್ರಾಮಾಂತರದಲ್ಲಿ ಇಂದು ವಿದ್ಯುತ್ ಇಲ್ಲ

ದಾವಣಗೆರೆ ತಾಲ್ಲೂಕಿನ ಗ್ರಾಮೀಣ ಉಪವಿಭಾಗದ ಇಂದು ಬೆಳಿಗ್ಗೆ 10 ರಿಂದ 6 ರವರೆಗೆ ಜೆ.ಹೆಚ್.ಪಟೇಲ್ ಬಡಾವಣೆ, ಶಿವ ಪಾರ್ವತಿ ಬಡಾವಣೆ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಡಿ.ಸಿ.ಎಂ ಫೀಡರ್ ವ್ಯಾಪ್ತಿಯ ವಾಸವಿ ದೇವಸ್ಥಾನ, ಶಕ್ತಿನಗರ, ಶಕ್ತಿನಗರ ಪಾರ್ಕ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ನಿರ್ಮಾಣ ಕಾರ್ಯ ಆರಂಭಿಸಿ

**(1ನೇ ಪುಟದಿಂದ)** ಹಾನಿಗೊಳಗಾದ ರಸ್ತೆಗಳನ್ನು ತಾತ್ಕಾಲಿಕವಾಗಿ ದುರಸ್ತಿ ಮಾಡಿಸಿ ಸಾರ್ವಜನಿಕರ ಓಡಾಟಕ್ಕೆ ಅನುವು ಮಾಡಿಕೊಡಬೇಕು, ತುರ್ತಾಗಿ ಕೈಗೊಳ್ಳಬೇಕಿರುವ ಕೆಲಸಗಳ ಬಗ್ಗೆ ಸರ್ಕಾರಕ್ಕೆ ಮಾಹಿತಿ ನೀಡಿ.

ರೈತರಿಗೆ ಬೆಳೆ ಹಾನಿಗೆ ಪರಿಹಾರ ನೀಡಲು ಆದ್ಯತೆ ಮೇರೆಗೆ ಕೆಲಸ ಮಾಡಬೇಕು, ವಿಶೇಷವಾದ ಸಂದರ್ಭವಾದ್ದರಿಂದ ರೈತರು ಹಾಗೂ ಸಾರ್ವಜನಿಕರ ಸಮಸ್ಯೆಗಳ ಇತ್ಯರ್ಥಕ್ಕೆ ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು ಎಂದು ಹೇಳಿದ್ದಾರೆ.

## ಕೋವಿಡ್ : ವೈದ್ಯರ ನಿಯೋಜನೆ

**(1ನೇ ಪುಟದಿಂದ)** ಕ್ರಮಗಳನ್ನು ಹಮ್ಮಿಕೊಳ್ಳಲು ಆದ್ಯತೆ ನೀಡಬೇಕು.

ಕೋವಿಡ್ ಸಂಖ್ಯೆ ಹೆಚ್ಚಾಗುತ್ತಿದ್ದು, ಆಸ್ಪತ್ರೆಗಳಲ್ಲಿ ಹಾಸಿಗೆಗಳ ಲಭ್ಯತೆಯ ಬಗ್ಗೆ ಗಮನ ಹರಿಸ ಬೇಕು. ಐ.ಸಿ.ಯುಗಳಲ್ಲಿ ವೆಂಟಿಲೇಟರ್‌ಗಳ ಲಭ್ಯತೆಯ ಬಗ್ಗೆಯೂ ನಿಗಾ ವಹಿಸಬೇಕು. ಗೃಹ ನಿರ್ಬಂಧದಲ್ಲಿರುವವರ ಬಗ್ಗೆ ಮೇಲ್ವಿಚಾರಣೆ ಮಾಡುವುದನ್ನು ಸಹ ಪ್ರಮುಖವಾಗಿ ಮಾಡಬೇಕು ಎಂದು ಸಿಎಂ ತಿಳಿಸಿದ್ದಾರೆ.

**ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.**
ಸಂಖ್ಯೆ:ದಾಮಪಾ/ಆ.ಶಾ/ಆ.ವ್ಯ/ಸಿಆರ್-01/2020-21
ದಿನಾಂಕ: 21.08.2020

**ಆಸಕ್ತಿ ವ್ಯಕ್ತಪಡಿಸುವಿಕೆ ಆಹ್ವಾನ**

ದಾವಣಗೆರೆ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬೃಹತ್/ವಾಣಿಜ್ಯ ತ್ಯಾಜ್ಯಉತ್ಪಾದಕರಿಂದ ದಿನನಿತ್ಯಉತ್ಪಾದನೆಯಾಗುವ ತ್ಯಾಜ್ಯವನ್ನು ಸಂಗ್ರಹಿಸಿ, ಪ್ರಾಥಮಿಕ ಹಂತದಲ್ಲಿಯೇ ವೈಜ್ಞಾನಿಕವಾಗಿ ವಿಂಗಡಿಸಿ, ಸದರಿಕಸವನ್ನು ಎರಡನೇ ಹಂತದ ಕಸ ಸಂಗ್ರಹಣಾ ಸ್ಥಳಗಳಿಗೆ ಸಾಗಿಸಲು ಸೂಕ್ತ ವ್ಯವಸ್ಥೆ ಕಲ್ಪಿಸಲು ಆಸಕ್ತ ವೃತ್ತಿಪರ ಸಂಸ್ಥೆಗಳು, ಖಾಸಗಿ ಕಂಪನಿಗಳು ಹಾಗೂ ಸಾರ್ವಜನಿಕರಿಂದ ಸೂಕ್ತ ಪ್ರಸ್ತಾವನೆಗಳಿಗಾಗಿ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು 05 ಪ್ಯಾಕೇಜ್‌ರಂತೆ ಈ ಮೂಲಕ ಆಹ್ವಾನಿಸಲಾಗುತ್ತಿದೆ. ಆಸಕ್ತರು ಸದರಿ ದಿನನಿತ್ಯ ಉತ್ಪಾದನೆಯಾಗುವ ತ್ಯಾಜ್ಯವನ್ನು ಸಂಗ್ರಹಿಸಿ, ಪ್ರಾಥಮಿಕ ಹಂತದಲ್ಲಿಯೇ ವೈಜ್ಞಾನಿಕವಾಗಿ ವಿಂಗಡಿಸಿ, ನಿರ್ವಹಿಸಲು ಸದರಿಕಸವನ್ನು ಎರಡನೇ ಹಂತದ ಕಸ ಸಂಗ್ರಹಣಾ ಸ್ಥಳಗಳಿಗೆ ವಿಲೇವಾರಿ ಮಾಡಲು ಅವಶ್ಯಕ ಸೂಕ್ತ ಖಾಸಗಿ ಜಾಗದಲ್ಲಿ ಅಥವಾ ಮಹಾನಗರ ಪಾಲಿಕೆಯು ನಿಗದಿಪಡಿಸಿದ ಸ್ಥಳದಲ್ಲಿ ತಮ್ಮ ಸ್ವಂತ ವ್ಯವಸ್ಥೆಯ ಮೂಲಕ ಕಲ್ಪಿಸುವುದು. ಸೇವಾ ಪೂರೈಕೆದಾರರು ತಮ್ಮ ಸಂಪೂರ್ಣ ವ್ಯವಸ್ಥೆಯನ್ನು "ತ್ಯಾಜ್ಯ ವಿಲೇವಾರಿ ನಿರ್ವಹಣಾ ನಿಯಮಾವಳಿಗಳು, 2016" ಸೇರಿದಂತೆ ಇನ್ನಿತರೆ ಸಕ್ಷಮ ಕಾನೂನು ಮತ್ತು ನಿಯಮಾವಳಿಗಳಿಗೆ ಬದ್ಧರಾಗಿ ನಡೆಸಲು ಸಿದ್ಧರಿರಬೇಕು. ಆಸಕ್ತರು ತಾವು ಪ್ರಸ್ತಾಪಿಸಲಿಚ್ಛಿಸುವ ವ್ಯವಹಾರ ಮಾದರಿ, ನಿಮ್ಮ ಸಂಸ್ಥೆಯಲ್ಲಿರುವ ವಾಹನದ ವಿವರ (ಆರ್.ಸಿ. ಬುಕ್, ವಿಮೆ, ಚಾಲಕರ ಡ್ರೈವಿಂಗ್ ಲೈಸೆನ್ಸ್), ಕಾರ್ಮಿಕರ ಸಂಖ್ಯೆ (ಒಂದು ವಾಹನಕ್ಕೆ 4 ಜನ ಸಹಾಯಕರಂತೆ), ಬಂಡವಾಳ ಕ್ರೋಢೀಕರಣ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ದಸ್ತಾವೇಜನ್ನು ದಿನಾಂಕ: 14/09/2020ರ ನಂತರಈ ಕಛೇರಿಯ ವೆಬ್‌ಸೈಟ್ www.davanagerecity.mrc.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಹಾಗೂ ವಿಸ್ತೃತ ಮಾಹಿತಿಗಳನ್ನು ಒಳಗೊಂಡಂತೆ ತಮ್ಮ ಪ್ರಸ್ತಾವನೆಯನ್ನು/ಆಸಕ್ತಿ ವ್ಯಕ್ತಪಡಿಸುವಿಕೆಯನ್ನುದಿನಾಂಕ: 30/09/2020ರ ಸಂಜೆ 04.00 ಗಂಟೆಯೊಳಗಾಗಿ ಈ ಕಛೇರಿಗೆ ಸಲ್ಲಿಸಲು ಕೋರಿದೆ.

ವಾಸಾಇ/ದಾವಣಗೆರೆ/326/ ಎಂಸಿಎ/2020-21

ಸಹಿ/- ಆಯುಕ್ತರು,
ಮಹಾನಗರ ಪಾಲಿಕೆ, ದಾವಣಗೆರೆ

ಬಾಪೂಜಿ ವಿದ್ಯಾಸಂಸ್ಥೆ (ರಿ), ದಾವಣಗೆರೆ


**ಬಿ.ಇ.ಎ ಪ್ರೌಢಶಾಲೆ**


ಶ್ರೀ ಎಸ್.ನಿಜಲಿಂಗಪ್ಪ ಬಡಾವಣೆ, ದಾವಣಗೆರೆ-577004


2019-20ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ನಮ್ಮ ಪ್ರೌಢಶಾಲೆಯಿಂದ ಕುಳಿತುಕೊಂಡಿದ್ದ ವಿದ್ಯಾರ್ಥಿಗಳು ಶೇಕಡಾ 92.30% ಫಲಿತಾಂಶವನ್ನು ಪಡೆದಿದ್ದಾರೆ. ಅವರಲ್ಲಿ ಕು॥ ಆರ್.ಸೋನಿಯಾ ಬಾಯಿ ಎಂಬ ವಿದ್ಯಾರ್ಥಿನಿಯು 625ಕ್ಕೆ 591 (94.56%) ಅಂಕಗಳನ್ನು ಪಡೆದು ಶಾಲೆಗೆ ಕೀರ್ತಿಯನ್ನು ತಂದಿರುತ್ತಾಳೆ


ವಿಶಿಷ್ಟ ದರ್ಜೆ-07 | ಪ್ರಥಮ ಶ್ರೇಣಿ-33 | ದ್ವಿತೀಯ ಶ್ರೇಣಿ-06 | ತೃತೀಯ ಶ್ರೇಣಿ-02


2019-20ನೇ ಸಾಲಿನಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳು



E-96 H-96 M-96 SS-96
ಆರ್.ಸೋನಿಯಾ ಬಾಯಿ
591 (94.56%)



K-117 SS-90
ಗೌಸ್ ಎ ಜ್ಞಾಮಾ
559 (89.44%)


K-117 SC-95
ಸಾಕ್ಷಿ ನಾಗರಾಜ್ ಮಶೆಟ್ಟಿ
550 (88.00%)


H-96 SS-97
ಸುಹಾಸ್ ಎಂ.ಜಿ
550 (88.00%)


K-124 SS-92
ಗ್ರೀಷ್ಮ ಡಿ.ಬಿ
547 (87.52%)


E-97 SS-96
ಐಶ್ವರ್ಯ ಎ ರಾವ್
544 (87.04%)


H-97
ನಿತೀಶ್ ಆರ್ ಮಲಘರ್
533 (85.28%)

ಉತ್ತಮ ಫಲಿತಾಂಶದಿಂದಾಗಿ ಶಾಲೆಗೆ 'ಎ' ಗ್ರೇಡ್ ತಂದುಕೊಟ್ಟ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಸನ್ಮಾನ್ಯ ಡಾ॥ ಶಾಮನೂರು ಶಿವಶಂಕರಪ್ಪನವರು ಆಡಳಿತ ಮಂಡಳಿಯ ಎಲ್ಲಾ ಸದಸ್ಯರು, ಶೈಕ್ಷಣಿಕ ನಿರ್ದೇಶಕರಾದ ಡಾ॥ ಎಂ.ಜಿ.ಈಶ್ವರಪ್ಪನವರು, ಶಾಲಾ ಆಡಳಿತಾಧಿಕಾರಿಗಳಾದ ಶ್ರೀ ವೈ.ವೃಷಬೇಂದ್ರಪ್ಪನವರು, ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಗಿರಿಜಾ ಕೆ.ಎಂ ಹಾಗೂ ಬೋಧಕ ಮತ್ತು ಬೋಧಕೇತರ ವರ್ಗದವರು ಸಾಧನೆಗೈದ ವಿದ್ಯಾರ್ಥಿಗಳನ್ನು ಅಭಿನಂದಿಸಿರುತ್ತಾರೆ.

2020-21ನೇ ಸಾಲಿನಲ್ಲಿ 9 ಮತ್ತು 10ನೇ ತರಗತಿಗಳಿಗೆ (ರಾಜ್ಯ ಪಠ್ಯಕ್ರಮ) ಸೇರ ಬಯಸುವ ವಿದ್ಯಾರ್ಥಿಗಳಿಗೆ ದಾಖಲಾತಿ ಪ್ರಕ್ರಿಯೆ ಪ್ರಾರಂಭವಾಗಿದೆ.
ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿರಿ- 08192- 220877 ಮತ್ತು 7892203566

# ಕೊಪ್ಪಳ ಆರೋಗ್ಯಾಧಿಕಾರಿಯಾಗಿ ರವೀಂದ್ರನಾಥ್

## 'ಅಧಿಕಾರಿಗಳ ವರ್ತನೆಯಿಂದ ಬೇಸತ್ತಿದ್ದ' ವೈದ್ಯಗೆ ಕಣ್ತೆರೆದ ಸರ್ಕಾರ

ದಾವಣಗೆರೆ, ಸೆ. 10 - ಅಧಿಕಾರಿಗಳ ವರ್ತನೆಯಿಂದ ಬೇಸತ್ತು ವೈದ್ಯಕೀಯ ವೃತ್ತಿ ಬದಲು ಆಟೋ ಓಡಿಸುತ್ತಿದ್ದ ಡಾ. ಎಂ.ಹೆಚ್. ರವೀಂದ್ರನಾಥ್ ಅವರ ಸಮಸ್ಯೆ ಬಗ್ಗೆ ಸರ್ಕಾರ ಕೊನೆಗೂ ಕ್ರಮ ತೆಗೆದುಕೊಂಡಿದೆ.

ಆರ್.ಸಿ.ಹೆಚ್. ಅಧಿಕಾರಿ ರವೀಂದ್ರನಾಥ್ ಅವರನ್ನು ಕೊಪ್ಪಳ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯಾಗಿ ನಿಯೋಜಿಸಿರುವುದಾಗಿ ಆರೋಗ್ಯ ಸಚಿವ ಬಿ. ಶ್ರೀರಾಮುಲು ಫೇಸ್‌ಬುಕ್‌ನಲ್ಲಿ ತಿಳಿಸಿದ್ದಾರೆ.

ರವೀಂದ್ರನಾಥ್ ಅವರು ದಾವಣಗೆರೆಯಲ್ಲಿ ಆಟೋ ಓಡಿಸುತ್ತಿದ್ದಾರೆ ಎಂಬ ವರದಿ ಮಾಧ್ಯಮಗಳಲ್ಲಿ ಬಂದಿರುವುದನ್ನು ಪರಿಗಣಿಸಿ, ಹಿರಿಯ ಅಧಿಕಾರಿಗಳಿಂದ ವರದಿ ಕೇಳಿದ್ದೆ. ವರದಿ ಪರಿಶೀಲಿಸಿದ ನಂತರ ಕ್ರಮ ತೆಗೆದುಕೊಂಡಿರುವುದಾಗಿ ಶ್ರೀರಾಮುಲು ಹೇಳಿದ್ದಾರೆ.

ಹಗಲಿರುಳೂ ಶ್ರಮಿಸುತ್ತಿರುವ ಎಲ್ಲಾ ವೈದ್ಯರ ಹಿತಾಸಕ್ತಿ ಕಾಪಾಡಲು ನಮ್ಮ ಸರ್ಕಾರ ಬದ್ಧ ಎಂದೂ ಶ್ರೀರಾಮುಲು ಹೇಳಿದ್ದಾರೆ.

ಆರೋಗ್ಯ ಇಲಾಖೆ, ಐಎಎಸ್ ಅಧಿಕಾರಿಗಳ ವರ್ತನೆಯಿಂದ ನೊಂದಿದ್ದ ಡಾ.ರವೀಂದ್ರನಾಥ್ ಕೆಎಟಿ ಮೊರೆ ಹೋಗಿದ್ದರು. ನ್ಯಾಯಾಲಯದಲ್ಲಿ ಡಾ.ಎಂ. ಹೆಚ್.ರವೀಂದ್ರನಾಥ ಪರ ತೀರ್ಪು ಬಂದರೂ, ಹುದ್ದೆಯ ಜವಾಬ್ದಾರಿ ವಹಿಸಿರಲಿಲ್ಲ.

ಇದರಿಂದ ಬೇಸತ್ತಿದ್ದ ರವೀಂದ್ರನಾಥ್, ಆಟೋ ಓಡಿಸುವ ಕೆಲಸಕ್ಕೆ ಮುಂದಾಗಿದ್ದರು. ಆಟೋ ಮೇಲೆ 'ಐ.ಎ.ಎಸ್. ಅಧಿಕಾರಿಗಳ ದುರಾಡಳಿತದಿಂದ ಬೇಸತ್ತ ಜೀವ' ಎಂದು ಬರೆದುಕೊಳ್ಳುವ ಮೂಲಕ ಗಮನ ಸೆಳೆದಿದ್ದರು.

# ಸಿಬಿಎಸ್ಸಿ ಕಂಪಾರ್ಟ್‌ಮೆಂಟ್ ಪರೀಕ್ಷೆ ಹೆಚ್ಚು ಪ್ರಯೋಜನವಾಗದು : ಸುಪ್ರೀಂ

ನವದೆಹಲಿ, ಸೆ. 10 - ಪ್ರವೇಶ ನೀಡುವುದು ಕಾಲೇಜುಗಳು ಹಾಗೂ ವಿಶ್ವವಿದ್ಯಾನಿಲಯಗಳಿಗೆ ಬಿಟ್ಟದ್ದಾಗಿರುವುದರಿಂದ, ಸಿಬಿಎಸ್‌ಇ ಕಂಪಾರ್ಟ್‌ಮೆಂಟ್ ಪರೀಕ್ಷೆಗಳನ್ನು ನಡೆಸುವ ಮೂಲಕ ವಿದ್ಯಾರ್ಥಿಗಳಿಗೆ ಹೆಚ್ಚು ಪ್ರಯೋಜನ ನೀಡಲು ಸಾಧ್ಯವಾಗದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಕೊರೊನಾ ಸಂದರ್ಭದಲ್ಲಿ ಸಿಬಿಎಸ್‌ಇ ಕಂಪಾರ್ಟ್‌ಮೆಂಟ್ ಪರೀಕ್ಷೆ ನಡೆಸಲು ಮುಂದಾಗಿರುವುದು ಆರೋಗ್ಯಕ್ಕೆ ಹಾನಿ ತರಲಿದೆ ಎಂದು ದಾಖಲಾಗಿದ್ದ ಅರ್ಜಿಯ ವಿಚಾರಣೆ ನಡೆಸುವಾಗ ಸುಪ್ರೀಂ ಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಈ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದು ಕಾಲೇಜು, ವಿಶ್ವವಿದ್ಯಾನಿಲಯ ಹಾಗೂ ಡೀಮ್ಡ್ ವಿಶ್ವವಿದ್ಯಾನಿಲಯಗಳಿಗೆ ಬಿಟ್ಟ ವಿಷಯವಾಗಿದೆ. ಹೀಗಾಗಿ ವಿದ್ಯಾರ್ಥಿಗಳು ಕಂಪಾರ್ಟ್‌ಮೆಂಟ್ ಪರೀಕ್ಷೆಗೆ ಒಳಗಾಗುವಂತೆ ಮಾಡುವ ಮೂಲಕ ಸಿಬಿಎಸ್‌ಇ ಹೆಚ್ಚು ನೆರವು ನೀಡಲು ಸಾಧ್ಯವಾಗದು ಎಂದು ವಿಚಾರಣೆ ನಡೆಸುತ್ತಿರುವ ಪೀಠದ ಮುಖ್ಯಸ್ಥರಾದ ಎ.ಎಂ. ಖಾನ್ವಿಲ್ಕರ್ ಹೇಳಿದ್ದಾರೆ. ಪೀಠದಲ್ಲಿ ನ್ಯಾಯಮೂರ್ತಿಗಳಾದ ದಿನೇಶ್ ಮಹೇಶ್ವರಿ ಹಾಗೂ ಸಂಜೀವ್ ಖನ್ನಾ ಅವರಿದ್ದಾರೆ.

ವಿದ್ಯಾರ್ಥಿಗಳಿಗೆ ಹಂಗಾಮಿಯಾಗಿ ಪ್ರವೇಶ ನೀಡಬೇಕು ಇಲ್ಲವೇ ಕಂಪಾರ್ಟ್‌ಮೆಂಟ್ ಪರೀಕ್ಷೆ ಮುಗಿಯುವವರೆಗೂ ಕಾಯುವಂತೆ ಕಾಲೇಜುಗಳಿಗೆ ಸಿಬಿಎಸ್‌ಇ ತಿಳಿಸಬೇಕು ಎಂದು ಹಿರಿಯ ವಕೀಲ ವಿವೇಕ್ ಟಂಖ ಅವರು ಅರ್ಜಿದಾರರ ಪರವಾಗಿ ವಾದ ಮಂಡಿಸಿದ್ದರು.

ಸೆಪ್ಟೆಂಬರ್ 22ರಿಂದ 29ರವರೆಗೆ ಕಂಪಾರ್ಟ್‌ಮೆಂಟ್ ಪರೀಕ್ಷೆಗಳು ನಡೆಯಬೇಕಿದೆ. ಆ ವೇಳೆಗೆ ಹಲವಾರು ಕೋರ್ಸ್‌ಗಳ ಪ್ರವೇಶ ಮುಗಿದಿರುತ್ತದೆ ಎಂದು ಟಂಖ ವಾದ ಮಂಡಿಸಿದ್ದಾರೆ.

ಸಿಬಿಎಸ್‌ಇನಲ್ಲಿ ಒಂದು ವಿಷಯದಲ್ಲಿ ಮಾತ್ರ ಕಡಿಮೆ ಅಂಕ ಪಡೆದು, ಉಳಿದ ವಿಷಯಗಳಲ್ಲಿ ಉತ್ತೀರ್ಣರಾಗುವ ಅಂಕ ಪಡೆದವರನ್ನು ಕಂಪಾರ್ಟ್‌ಮೆಂಟ್ ಎಂದು ಗುರುತಿಸಲಾಗಿದೆ. ಇವರು ಪರೀಕ್ಷೆಯಲ್ಲಿ ಪಾಲ್ಗೊಳ್ಳುವ ಮೂಲಕ ಉತ್ತೀರ್ಣತೆ ಹೊಂದಲು ಅವಕಾಶ ಕಲ್ಪಿಸಲಾಗಿದೆ.

# ಜಿಲ್ಲೆಯಲ್ಲಿ 297 ಸೋಂಕು, ಮೂವರ ಸಾವು

ದಾವಣಗೆರೆ, ಸೆ. 10 - ಜಿಲ್ಲೆಯಲ್ಲಿ ಗುರುವಾರ 297 ಜನರಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿದೆ. ಇದೇ ದಿನ ಮೂವರು ಸೋಂಕಿನಿಂದ ಮೃತಪಟ್ಟಿದ್ದರೆ, 244 ಜನ ಗುಣವಾಗಿ ಬಿಡುಗಡೆಯಾಗಿದ್ದಾರೆ.

ಜಿಲ್ಲೆಯಲ್ಲಿ ಇದುವರೆಗೂ ಕೊರೊನಾ ಸೋಂಕಿಗೆ ಗುರಿಯಾದವರ ಸಂಖ್ಯೆ 12 ಸಾವಿರದ ಗಡಿ ದಾಟಿದ್ದು 12,189ಕ್ಕೆ ತಲುಪಿದೆ. ಇದೇ ವೇಳೆ ಬಿಡುಗಡೆಯಾದವರ ಸಂಖ್ಯೆಯೂ 9,213ಕ್ಕೆ ತಲುಪಿದೆ. ಇದುವರೆಗೂ 223 ಜನರು ಸೋಂಕಿನಿಂದ ಸಾವನ್ನಪ್ಪಿದ್ದಾರೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ದಾವಣಗೆರೆ ತಾಲ್ಲೂಕಿನ 118, ಹರಿಹರದ 60, ಜಗಳೂರಿನ 13, ಚನ್ನಗಿರಿಯ 49, ಹೊನ್ನಾಳಿಯ 46 ಹಾಗೂ ಹೊರ ಜಿಲ್ಲೆಗಳ 11 ಜನರಲ್ಲಿ ಸೋಂಕು ಕಾಣಿಸಿಕೊಂಡಿದೆ.

ಇದೇ ದಿನ ದಾವಣಗೆರೆ ತಾಲ್ಲೂಕಿನ 162 ಜನ ಗುಣವಾಗಿ ಬಿಡುಗಡೆಯಾಗಿದ್ದಾರೆ. ಹರಿಹರದ 24, ಜಗಳೂರಿನ 19, ಚನ್ನಗಿರಿಯ 15, ಹೊನ್ನಾಳಿಯ 23 ಹಾಗೂ ಹೊರ ಜಿಲ್ಲೆಯ ಒಬ್ಬರು ಗುಣವಾಗಿ ಬಿಡುಗಡೆಯಾಗಿದ್ದಾರೆ. ದಾವಣಗೆರೆಯ ಪಿ.ಜೆ. ಬಡಾವಣೆಯ 75 ವರ್ಷದ ಪುರುಷ ಕೊರೊನಾದಿಂದ ಮೃತಪಟ್ಟಿದ್ದು, ಇವರು ಸಕ್ಕರೆ ಕಾಯಿಲೆ, ರಕ್ತದೊತ್ತಡ ಸೇರಿದಂತೆ ಹಲವು ಅನಾರೋಗ್ಯಗಳಿಂದ ಬಳಲುತ್ತಿದ್ದರು.

ದಾವಣಗೆರೆಯ ನಿಟುವಳ್ಳಿಯ 60 ವರ್ಷದ ಮಹಿಳೆ ಹಾಗೂ ಹರಿಹರದ ಜೆ.ಸಿ. ಬಡಾವಣೆಯ 73 ವರ್ಷದ ಪುರುಷ ಸಹ ಸೋಂಕಿನಿಂದ ಸಾವನ್ನಪ್ಪಿದ್ದಾರೆ.

## ಮಲೇಬೆನ್ನೂರು : 14 ಸೋಂಕು

ಮಲೇಬೆನ್ನೂರು, ಸೆ.10- ಗುರುವಾರ ಮಲೇಬೆನ್ನೂರು ಹೋಬಳಿಯಲ್ಲಿ 14 ಜನರಿಗೆ ಕೊರೊನಾ ಸೋಂಕು ದೃಢಪಟ್ಟಿದೆ. ಮಲೇಬೆನ್ನೂರಿನಲ್ಲಿ 6 ಜನರಿಗೆ ನಂದಿಗಾವಿಯಲ್ಲಿ ನಾಲ್ವರಿಗೆ ಯಲವಟ್ಟಿ, ಕೊಕ್ಕನೂರು, ಹಾಲಿವಾಣ, ವಾಸನ ಗ್ರಾಮಗಳಲ್ಲಿ ತಲಾ ಒಬ್ಬರಿಗೆ ಸೋಂಕು ತಗುಲಿದೆ ಎಂದು ಉಪತಹಶೀಲ್ದಾರ್ ರವಿ ತಿಳಿಸಿದ್ದಾರೆ.

# ಹರಿಹರದಲ್ಲಿ ಇಂದು ನೀರು ಸರಬರಾಜಿನಲ್ಲಿ ವ್ಯತ್ಯಯ

ಹರಿಹರ ನಗರಸಭೆ ವ್ಯಾಪ್ತಿಯಲ್ಲಿ ಜಲಸಿರಿ ಯೋಜನೆಯಡಿ ಕೈಗೊಂಡಿರುವ (24x7) ಬೃಹತ್ ನೀರು ಸರಬರಾಜು ಕಾಮಗಾರಿಗೆ ಸಂಬಂಧಿಸಿದಂತೆ ಹೊಸದಾಗಿ ಹಳೇ ಪಂಪ್ ಹೌಸ್ ಹತ್ತಿರ ನಿರ್ಮಿಸಿದ ನೀರು ಶುದ್ಧೀಕರಣ ಘಟಕದ ಹತ್ತಿರ (ಡಬ್ಲ್ಯೂ.ಟಿ.ಪಿ) ವಿದ್ಯುತ್ ಪರಿವರ್ತಕವನ್ನು ಸ್ಥಳಾಂತರಿಸುವುದು ಮತ್ತು ಇತರೆ ವಿದ್ಯುತ್ ಕಾಮ ಗಾರಿಗಳನ್ನು ಕೈಗೊಳ್ಳಬೇಕಾಗಿರುವುದರಿಂದ ಸಾರ್ವಜನಿಕರಿಗೆ ಇಂದು ಕುಡಿಯುವ ನೀರಿನ ಸರಬರಾಜಿನಲ್ಲಿ ವ್ಯತ್ಯಯ ವಾಗಲಿದೆ ಎಂದು ನಗರಸಭೆ ಪೌರಾಯುಕ್ತರಾದ ಶ್ರೀಮತಿ ಲಕ್ಷ್ಮಿ ತಿಳಿಸಿದ್ದಾರೆ.

# ತಾ.ಪಂ. ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಮಂಜುಳಾ



ದಾವಣಗೆರೆ, ಸೆ.10- ದಾವಣಗೆರೆ ತಾಲ್ಲೂಕು ಪಂಚಾಯ್ತಿ ಕೊನೆಯ 10 ತಿಂಗಳ ಅವಧಿಗೆ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿ ಬಾಡಾ ಕ್ಷೇತ್ರದ ತಾಲ್ಲೂಕು ಪಂಚಾಯಿತಿ ಸದಸ್ಯರಾದ ಶ್ರೀಮತಿ ಮಂಜುಳ ಶಿವಮೂರ್ತಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ತಾಲ್ಲೂಕು ಪಂಚಾಯಿತಿಯ ಸಭಾಂಗಣದಲ್ಲಿ ಇಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಚುನಾವಣೆಯಲ್ಲಿ ಸಮಿತಿಯ ಆರು ಜನರ ಉಪಸ್ಥಿತಿಯಲ್ಲಿ ಹಾಗೂ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಾದ ಮಮತಾ ಮಲ್ಲೇಶ್, ಉಪಾಧ್ಯಕ್ಷರಾದ ಮೀನಾ ಶ್ರೀನಿವಾಸ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಬಿ.ಎಂ. ದ್ವಾರಕೇಶ್ ಅವರುಗಳು ಚುನಾವಣೆಯನ್ನು ನಡೆಸಿಕೊಟ್ಟರು.

ಸಭೆಯಲ್ಲಿ ಸ್ಥಾಯಿ ಸಮಿತಿಯ ಸದಸ್ಯರುಗಳಾದ ಉಮೇಶ್ ನಾಯಕ್, ರಾಜೇಶ್ವರಿ ಆರ್. ಪ್ರಕಾಶ್, ಸಾವಿತ್ರ ವೆಂಕಟೇಶ್ ನಾಯಕ್, ರುದ್ರೇಶ್ ನಾಯಕ್, ಮಳಲಕೆರೆ ಮುರುಗೇಶ್ ಮತ್ತು ತಾ.ಪಂ. ಮಾಜಿ ಉಪಾಧ್ಯಕ್ಷ ಸಂಗಜ್ಜ ಗೌಡ್ರು, ಕಾಟೇಹಳ್ಳಿ ಹಾಲೇಶಪ್ಪ ಉಪಸ್ಥಿತರಿದ್ದರು.

# ಕಾನೂನಿನ ನೆಪದಲ್ಲಿ ಶ್ರೀಸಾಮಾನ್ಯರ ಮೇಲೆ ದೌರ್ಜನ್ಯ : ಕಾಂಗ್ರೆಸ್ ಆರೋಪ

ದಾವಣಗೆರೆ, ಸೆ.10- ಐಎಸ್‌ಐ ಮಾರ್ಕಿನ ಪೂರ್ಣ ಹೆಲ್ಮೆಟ್ ಕಡ್ಡಾಯ ಮಾಡಿ ರುವ ರಾಜ್ಯ ಸರ್ಕಾರ ಹೆಲ್ಮೆಟ್ ಕಂಪನಿ ಗಳಿಂದ ಹಣ ಪಡೆದು ಸಾರ್ವಜನಿಕರಿಂದ ಕೊರೊನಾದಂತಹ ಕಷ್ಟದ ಸಮಯದಲ್ಲಿ ಸುಲಿಗೆ ಮಾಡುತ್ತಿದೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ಆರೋಪಿಸಿದರು.

ಸರ್ಕಾರಕ್ಕೆ ಹಾಗೂ ಪೊಲೀಸರಿಗೆ ಆದಾಯ ಗಳಿಸುವ ಮರಳು, ಬೆಟ್ಟಿಂಗ್ ಮುಂತಾದ ಬೇರೆ ಮೂಲಗಳಿದ್ದು, ಅವರಿಂದ ದಂಡ ವಸೂಲಿ ಮಾಡಿ. ಆದರೆ, ಕಾನೂನು ನೆಪದಲ್ಲಿ ಬಡ ರೈತರು ಹಾಗೂ ಸಾಮಾನ್ಯ ಜನರಿಂದ ಸುಲಿಗೆ ಮಾಡುವುದನ್ನು ಬಿಟ್ಟು ಬಿಡಿ ಎಂದು ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ನಗರ ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್ ಮಾತನಾಡಿ, ಆಜಾದ್ ನಗರ, ಶಾಂತಿ ಟಾಕೀಸ್, ಅಶೋಕ ಟಾಕೀಸ್ ಹೀಗೆ ಹಳೆ ದಾವಣಗೆರೆಯಲ್ಲಿ ಗುಂಪು ಗುಂಪಾಗಿ ನಿಂತು ಪೊಲೀಸರು ದಂಡ ವಸೂಲಿ ಮಾಡುತ್ತಿರುವ ರೀತಿ ಅಮಾನವೀಯ. ರಾಜ್ಯದ ಬೇರೆ ಯಾವುದೇ ಜಿಲ್ಲೆಯಲ್ಲಿ ಇರದ ಕಾನೂನು ನಮ್ಮ ದಾವಣಗೆರೆಯಲ್ಲಿ ಇದೆಯೇ? ಎಂದು ಪ್ರಶ್ನಿಸಿದರು.

ಪಾಲಿಕೆಯ ಸದಸ್ಯ ಗಡಿ ಗುಡಾಳ್ ಮಂಜುನಾಥ್ ಮಾತನಾಡಿ, ಪೊಲೀಸ್ ಇಲಾಖೆಗೆ ಟಾರ್ಗೆಟ್ ನೀಡಿದ್ದು, ಒಬ್ಬೊಬ್ಬ ಎಎಸ್‌ಐ ಗಳಿಗೆ ಇಷ್ಟಿಷ್ಟು ಕೇಸ್ ಹಾಕಬೇಕೆಂದು ಹೇಳಲಾಗಿದೆ. ಹಾಗಾಗಿ ಪೊಲೀಸ್ ಸಿಬ್ಬಂದಿ ಟಾರ್ಗೆಟ್ ಮುಟ್ಟಲು ಮಾನವೀಯತೆ ಮರೆತು ದೌರ್ಜನ್ಯ ನಡೆಸುತ್ತಿದ್ದಾರೆ ಎಂದು ದೂರಿದರು.

ಪಾಲಿಕೆ ಸದಸ್ಯ ಕೆ. ಚಮನ್ ಸಾಬ್ ಮಾತನಾಡಿ ಚೌಕಿಪೇಟೆ, ಕಾಳಿಕಾದೇವಿ ರಸ್ತೆಗಳಲ್ಲಿ ಪೊಲೀಸ್ ಸಿಬ್ಬಂದಿ ಅಂಗಡಿ ಮಾಲೀಕರುಗಳಿಂದ ಹಣ ಪಡೆದು ವಾಹನ ನಿಲ್ಲಿಸಲು ಅನುಕೂಲ ಮಾಡಿಕೊಡುತ್ತಿದ್ದಾರೆ. ಅಲ್ಲಿ ಇಲ್ಲದ ಕಾನೂನು ಸಾಮಾನ್ಯ ಜನರು ಹೆಲ್ಮೆಟ್ ಧರಿಸದೆ ಇದ್ದಾಗ ಬರುತ್ತದೆಯೇ. ಸರ್ಕಾರ ಕೋವಿಡ್-19ಕ್ಕೆ ಔಷಧಿ ಕಂಡು ಹಿಡಿಯುವವರೆಗೂ ಜನಸಾಮಾನ್ಯರಿಂದ ದಂಡ ವಸೂಲಿ ಮಾಡಬಾರದು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಪಾಲಿಕೆ ಸದಸ್ಯ ದೇವರಮನೆ ಶಿವಕುಮಾರ್, ಮುಖಂಡ ರಾದ ಶ್ರೀಕಾಂತ್ ಬಗರೆ, ಶಿವಾಜಿರಾವ್, ಕೆ.ಎಲ್. ಹರೀಶ್ ಮತ್ತಿತರರು ಉಪಸ್ಥಿತರಿದ್ದರು.

# ನೆರೆಹಾನಿ : ಸ್ಥಳಕ್ಕೆ ಭೇಟಿ ನೀಡಿದ ಮೇಯರ್ ಅಜಯ್‌ಕುಮಾರ್

ದಾವಣಗೆರೆ, ಸೆ.10- ಕೆಲವು ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಮಹಾನಗರ ಪಾಲಿಕೆ ವ್ಯಾಪ್ತಿಯ 30ನೇ ವಾರ್ಡ್ ಆವರಗೆರೆಯ ಚಿಕ್ಕನಹಳ್ಳಿ ಬಡಾವಣೆಯ ಮನೆಗಳಿಗೆ ನೀರು ನುಗ್ಗಿ ಹಾನಿಗೀಡಾದ ಸ್ಥಳಕ್ಕೆ ಪಾಲಿಕೆ ಮಹಾಪೌರರಾದ ಬಿ.ಜಿ.ಅಜಯ್ ಕುಮಾರ್ ಅವರು ಇಂದು ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಅಲ್ಲಿನ ರಾಜ ಕಾಲುವೆಯ ಮೇಲೆ ಸೇತುವೆ ನಿರ್ಮಾಣ ಕಾಮಗಾರಿಯನ್ನು ಆದಷ್ಟು ಬೇಗ ಪ್ರಾರಂಭ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಿದರು. ಸ್ಥಳೀಯ ನಾಗರಿಕರು ಕುಡಿಯುವ ನೀರಿನ ತೊಂದರೆ ಬಗ್ಗೆ ತಿಳಿಸಿದರು. ಕೂಡಲೇ ಸ್ಥಳದಲ್ಲಿ ನೀರಿನ ವ್ಯವಸ್ಥೆಯನ್ನು ಮಾಡಿದರು. ಪಾಲಿಕೆ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಜಯಮ್ಮ ಗೋಪಿ ನಾಯ್ಕ್, ಎಸ್.ಟಿ.ವೀರೇಶ್, ಪಾಲಿಕೆಯ ಅಭಿಯಂತರರು, ಆರೋಗ್ಯ ಅಧಿಕಾರಿಗಳು ಮತ್ತು ಇತರರು ಮೇಯರ್ ಅವರೊಂದಿಗಿದ್ದರು.



# ಸಿ.ಎಫ್.ಹುಲ್ಮನಿಗೆ 'ರಾಜ್ಯ ಆದರ್ಶ ಶಿಕ್ಷಕ' ಪ್ರಶಸ್ತಿ



ರಾಣೇಬೆನ್ನೂರು, ಸೆ.10- ತಾಲ್ಲೂಕಿನ ಹೆಡಿಯಾಲ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಸಿ.ಎಫ್.ಹುಲ್ಮನಿ ಅವರಿಗೆ ರಾಜ್ಯ ಆದರ್ಶ ಶಿಕ್ಷಕ ಪ್ರಶಸ್ತಿ ದೊರಕಿದ್ದು, ಶಿಕ್ಷಕರ ಸಂಘದ ಅಧ್ಯಕ್ಷ ಬಿ.ಪಿ. ಶಿಡೇನೂರ ಅಭಿನಂದಿಸಿದ್ದಾರೆ.







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte